[MR. DEPUTY SPEAKER in the Chair]

[Motion of Thanks to the Governor's Address]

(Debate Continued)

† ಶ್ರೀ ಎನ್. ರಾಚಯ್ಯ (ಸಮಾಜ ಕಲ್ಯಾಣ ಹಾಗೂ ಸಮುದಾಯ ಅಭಿವೃದ್ಧಿ ಶಾಖೆಗಳ ಮಂತ್ರಿಗಳು).—ಮಾನ್ಯ ಸಭಾಪತಿಗಳೇ, ಶ್ರೀಮಾನ್ ಪ್ರಭಾಕರ್‌ರವರು ರಾಜ್ಯಪಾಲರ ಭಾಷಣದ ವಂದನಾರ್ಪಣೆ ನಿರ್ಣಯದಮೇಲೆ ಚರ್ಚೆ ಮಾಡುವ ಕಾಲದಲ್ಲಿ ಕೆಲವಾರು ಪ್ರಾಮುಖ್ಯವಾದಂತಹ ವಿಷಯಗಳನ್ನು ಹರಿಜನರ ಗಿರಿಜನರ ಅಭಿವೃದ್ಧಿ ವಿಚಾರವಲ್ಲಿ ಪ್ರಸ್ತಾಪ ಮಾಡಿದ್ದಾರೆ. ಹಾಗೆ ಮಾಡುವಾಗ, ವಿದ್ಯಾಕ್ಷೇತ್ರದಲ್ಲಿ ಹರಿಜನ ಗಿರಿಜನರ ಮಕ್ಕಳಿಗೆ ವಿದ್ಯಾರ್ಥಿ ವೇತನ ಕೊಡುವಾಗ ಕೆಲವಾರು ಅನಿವಾರ್ಯಗಳು ತೊಂದರೆಗಳು ಇವೆ ಮತ್ತು ಸಕಾಲದಲ್ಲಿ, ಸಮರ್ಪಕವಾಗಿ ವಿದ್ಯಾರ್ಥಿ ವೇತನಗಳನ್ನು ನಾವು ಕೊಡುತಾ ಇಲ್ಲ ಎನ್ನುವ ಅಂಶಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಕೆಲವಾರು ವರ್ಷಗಳ ಹಿಂದೆ ಕೆಲವು ನ್ಯೂನತೆಗಳು ಇದ್ದುದುನಿಜ. ಆದರೆ ಕಳೆದ ಒಂದು ವರ್ಷದಿಂದ ಈ ಒಂದು ವಿದ್ಯಾರ್ಥಿವೇತನವನ್ನೂ ಕೇಂದ್ರಸರ್ಕಾರದವರು ಏನು ಕಾಲೇಜು ವಿದ್ಯಾರ್ಥಿಗಳಿಗೆ ಮಂಜೂರು ಪ್ರತಿ ವರ್ಷ ಮಾಡುತ್ತಿದ್ದಾರೆ ಈ ವಿದ್ಯಾರ್ಥಿವೇತನವನ್ನು ಡೈರೆಕ್ಟರ್ ಆಫೀಸು ಮೂಲಕ ಸಕಾಲಕ್ಕೆ ಸಂಬಂಧಪಟ್ಟ ವಿದ್ಯಾಸಂಸ್ಥೆಗಳಿಗೆ, ಕಾಲೇಜು ಅಧಿಕಾರಿಗಳ ಮೂಲಕ ಹಂಚಿಕೆ ಮಾಡುತ್ತಿದ್ದೇವೆ. ಕೆಲವು ಸಂದರ್ಭದಲ್ಲಿ ಈ ವಿದ್ಯಾರ್ಥಿವೇತನಗಳು ಸಕಾಲಕ್ಕೆ ವಿದ್ಯಾರ್ಥಿಗಳಿಗೆ ತಲುಪದೇ ಇರಬೇಕಾದರೆ ಒಂದೆರಡು ಸಂದರ್ಭಗಳಿಗೆ ಸರ್ಕಾರ ಹೊಣೆಯಲ್ಲ. ಸಂಬಂಧಪಟ್ಟ ಇಲಾಖೆಯು ಹೊಣೆ ಅಲ್ಲ. ಕೆಲವು ಸಂದರ್ಭದಲ್ಲಿ ವಿದ್ಯಾರ್ಥಿಗಳು ಸಕಾಲಕ್ಕೆ ಅರ್ಜಿಗಳನ್ನು ಕಳುಹಿಸದೇ, ಕೆಲವು ವಿದ್ಯಾರ್ಥಿಗಳು ಸ್ಕಾಲರ್‌ಷಿಪ್ ತೆಗೆದುಕೊಳ್ಳದೇ ಇರುವ ವಿಷಯಗಳು ಸರ್ಕಾರದ ಗಮನಕ್ಕೆ ಬಂದಿದೆ. ಇವುಗಳನ್ನೆಲ್ಲಾ ಸರಿಪಡಿಸತಕ್ಕ ರೀತಿಯಲ್ಲಿ ಸಂಬಂಧಪಟ್ಟ ಡೈರೆಕ್ಟರ್‌ರವರಿಗೆ ಈಗಾಗಲೇ ಆದೇಶಗಳನ್ನು ಕೊಟ್ಟಿದ್ದೇವೆ. ನನಗೆ ತಿಳಿದಮಟ್ಟಿಗೆ ಅನೇಕ ಕಾಲೇಜುಗಳಿಂದ ಯಾವ ವಿಧವಾದ ದೂರುಗಳೂ ನಮಗೆ ಬಂದಿಲ್ಲ. ಕೆಲವು ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ನೇರವಾಗಿ ವಿದ್ಯಾರ್ಥಿವೇತನವನ್ನು ಸ್ವೀಕಾರ ಮಾಡುವುದರಿಂದ ಅವರುಗಳ ಊಟ ವಸತಿ ಮುಂತಾದ ಜವಾಬ್ದಾರಿ ಅವರಿಗೆ ಸಂಬಂಧಪಟ್ಟಿದೆ. ಎಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಮುಂದೆ ಬಂದು ನಾವು ಹಾಸ್ಟೆಲ್ ಮಾಡಿಕೊಂಡು ನಡೆಸುತ್ತೇವೆಂದು ಮುಂದೆ ಬಂದರೆ, ಮತ್ತು ಸ್ಕಾಲರ್‌ಷಿಪ್ ಹಣವನ್ನು ಊಟ ವಸತಿಗಾಗಿ ಉಪಯೋಗಿಸುತ್ತೇವೆ ಎನ್ನುವ ಷರತ್ತನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಮ್ಯಾನೇಜ್‌ಮೆಂಟಿನವರಿಗೆ ಲಿಖಿತ ಮೂಲಕ ಬರೆದುಕೊಟ್ಟ ಪಕ್ಷದಲ್ಲಿ, ಸರ್ಕಾರದವರು ಕಟ್ಟಡಕ್ಕೆ ಬೇಕಾದರೆ ಬಾಡಿಗೆಯನ್ನು, ಹಾಸ್ಟಲಿಗೆ ಬೇಕಾದಂತ ಎಕ್ವಿಪ್‌ಮೆಂಟ್ ಗ್ರಾಂಟನ್ನು ಉಪಕರಣಗಳಿಗೋಸ್ಕರ ಗ್ರಾಂಟನ್ನು ನಾವು ಕೊಡುತ್ತೇವೆ. ಇದಲ್ಲದೆ ಉಳಿದ ಎಲ್ಲಾ ಖರ್ಚುಗಳನ್ನು ಅವರ ಒಂದು ವಿದ್ಯಾರ್ಥಿವೇತನದಿಂದ ಮಾಡಿಕೊಳ್ಳಬೇಕಾಗುತ್ತದೆ. ಈ ರೀತಿಯ ಒಂದು ವ್ಯವಸ್ಥೆಯನ್ನು ಸರ್ಕಾರ ಒಪ್ಪಿಕೊಂಡದ್ದಾರೂ ಕೂಡ ಕೆಲವು ಸಂದರ್ಭಗಳಲ್ಲಿ ಈ ಖಾಸಗೀ ಮ್ಯಾನೇಜ್‌ಮೆಂಟ್ ಯಾರು ಇದ್ದಾರೋ ಅವರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ವಿದ್ಯಾರ್ಥಿಗಳು ಊಟ ಮಾಡುತ್ತಾರೆ, ಹೊರಟು ಹೋಗುತ್ತಾರೆ. ವಿದ್ಯಾರ್ಥಿವೇತನ ಬಂದಾಗ ನಮಗೆ ಹಣವನ್ನು ಸರಿಯಾಗಿ ಕೊಡುತಾ ಇಲ್ಲ ಎಂದು. ಇನ್ನೂ ಕೆಲವು ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ನಮ್ಮ ಹತ್ತಿರ ಹಣ ತೆಗೆದುಕೊಂಡಿದ್ದಾರೆ ನಮಗೆ ಊಟ ವಸತಿಗಳು ಸರಿಯಾಗಿ ದೊರೆಯುತಾ ಇಲ್ಲ ಎಂದು ಬಂದಿದೆ. ಇವೆಲ್ಲವನ್ನೂ ಕೂಡ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ವಿದ್ಯಾರ್ಥಿಗಳು ಹಾಗೆ ನಡೆಯಬಾರದು, ಮ್ಯಾನೇಜ್‌ಮೆಂಟಿನವರು ಹಾಗ ನಡೆಯಬಾರದು. ನಾವು ಕೆಲವು ಆದೇಶಗಳನ್ನು ಕೊಟ್ಟ ಮೇಲೆ ಅನೇಕ ಕಡೆಗಳಲ್ಲಿ ಹಾಸ್ಟರ್‌ಗಳು ಏನು ನಡೆಯುತ್ತಿದ್ದಾವೋ, ಇನ್ನು ಅನೇಕ ವಿದ್ಯಾರ್ಥಿಗಳಿಗೆ ಹಾಸ್ಟಲಿನ ಸೌಲಭ್ಯ ಸಿಕ್ಕದೇ ಇರತಕ್ಕ ಕಡೆ ಹಾಸ್ಟಲ್ ಸೌಲಭ್ಯ ಸಿಕ್ಕುವ ಹಾಗೆ ಮಾಡಿದ್ದೇವೆ. ಇವತ್ತು ತಾನೇ ಒಂದು ಆಜ್ಞೆ ಮಾಡಿ ಡೈರೆಕ್ಟರವರಿಗೆ ಕಳುಹಿಸಿದೆ. ಗುಲ್ಬರ್ಗ ಜಿಲ್ಲೆಯ ಅಫಜಲ್‌ಪುರದಲ್ಲಿ ಕೆಲವೇ ಕಾಲೇಜು ವಿದ್ಯಾರ್ಥಿಗಳಿಗೆ ತೊಂದರೆ ಯಾಗಿದೆ, ಅಲ್ಲಿ ಇರತಕ್ಕ ಹೈಸ್ಕೂಲು ಅದು ಸರ್ಕಾರದಿಂದ ನಡೆಸುತ್ತೇವೆ. ಕೆಲವೇ 10–12 ಜನ ಇದ್ದರೆ ಕೊಡುವುದಕ್ಕಾಗುವುದಿಲ್ಲ. ಅವರಿಗೆ ತೊಂದರೆ ಇರುತ್ತದೆ, ಹತ್ತು ಜನರಿಗೆ ಒಂದು ಹಾಸ್ಟಲ್ ಮಾಡಿಕೊಡಿ ಎಂದರೆ, ಅಸ್ಪೃಶ್ಯತಾ ಆಚರಣಾ ದೆಸೆಯಿಂದ ವರ್ಗದ ವಿದ್ಯಾರ್ಥಿಗಳಿಗೆ ಕಟ್ಟಡ ಸಿಕ್ಕುತಾ ಇಲ್ಲ. ಕಡಿಮೆ ಸಂಖ್ಯೆಯಲ್ಲಿ ಇದ್ದರೆ ಪ್ರೌಢ ಶಾಲಾ ಮಕ್ಕಳ ವಿದ್ಯಾರ್ಥಿನಿಲಯದಲ್ಲಿ ಕೆಲವು ಕಾಲ ಸೇರಿಸಬಹುದು ಎಂದು ಆರ್ಡರ್ ಮಾಡಿ ಕಳುಹಿಸಿ

ಕೊಟ್ಟೆ. ಪ್ರಪ್ರಥಮವಾಗಿ ಈ ವರ್ಷ ಮಾತ್ರ ವಿಶೇಷ ರಿಯಾಯಿತಿಯನ್ನು ಮಕ್ಕಳಿಗೆ ಕೊಟ್ಟಿದ್ದೇವೆ. ಉದಾಹರಣೆಗೆ ನಂಜನಗೂಡಿನಲ್ಲಿ ಪಿ. ವೆಂಕಟರಮಣ ವಿಧಾನಪರಿಷತ್ತಿನ ಸದಸ್ಯರು ಆಗಿದ್ದಾರೆ. ರಾಜ್ಯ ಸರ್ಕಾರದ ಸಂಸ್ಥೆಯಲ್ಲಿ ಇದ್ದುಕೊಂಡು ನೂರಾರು ಜನ ಕಾಲೇಜು ವಿದ್ಯಾರ್ಥಿಗಳನ್ನು ಇಟ್ಟುಕೊಂಡು ಅವರ ಸ್ಕಾಲರ್‌ಷಿಪ್‌ನ್ನು ನೇರವಾಗಿ ಮ್ಯಾನೇಜ್‌ಮೆಂಟಿನವರೇ ತೆಗೆದುಕೊಳ್ಳುತ್ತಾರೆ. ಊಟ ವಸತಿ ಮುಂತಾದಕ್ಕೆ ಎಷ್ಟು ಆಗುತ್ತದೆ, ಉಳಿದ 15-20 ರೂಪಾಯಿಗಳನ್ನು ಆಗಲೇ ವಿದ್ಯಾರ್ಥಿಗಳಿಗೆ ಚೆಕ್ ಮೂಲಕ ತೆಗೆದುಕೊಂಡು ಹೋಗತಕ್ಕಂಥದ್ದನ್ನು ನೇರವಾಗಿ ತಿಳಿದುಕೊಂಡು ಬಂದಿದ್ದೇನೆ. ವಿದ್ಯಾರ್ಥಿ ವೇತನ ಹಂಚತಕ್ಕ ಸಮಸ್ಯೆ ವಿಚಾರದಲ್ಲಿ ಮಾನ್ಯ ಪ್ರಭಾಕರರವರು ಪ್ರಸ್ತಾಪ ಮಾಡಿದ್ದು ಕೆಲವು ಸಂದರ್ಭಗಳಲ್ಲಿ ಇರಬಹುದು, ಸರ್ವೇಸಾಮಾನ್ಯವಾಗಿ ದೂರುಗಳಿಗೆ ಅವಕಾಶ ಕೊಡದೆ, ಇರುವ ರೀತಿಯಲ್ಲಿ ಸಮಾಜ ಕಲ್ಯಾಣ ಇಲಾಖೆ ಸಮರ್ಪಕವಾದ ರೀತಿಯಲ್ಲಿ ವ್ಯವಸ್ಥೆಮಾಡಿ, ಕೈಸೇರುವಂತೆ ಮಾಡುತ್ತಿದ್ದೇವೆ. ಇದರಲ್ಲಿ ಏನಾದರೂ ಲೋಪದೋಷಗಳು ಇದ್ದಲ್ಲಿ, ಅವರು ಸಲಹೆ ಮಾಡಿದ ಪ್ರಕಾರ ಮುಂದಿನ ಸಾಲಿಗೆ ಇನ್ನೂ ಹೆಚ್ಚಿನ ಜಾಗರೂಕತೆಯಿಂದ ಮತ್ತು ಯಾವ ದಿಶೆಯಲ್ಲೂ ತೊಂದರೆ ಆಗದ ರೀತಿ ಫೈನಾನ್ಸ್ ಡಿಪಾರ್ಟ್‌ಮೆಂಟಿನವರನ್ನು ಒಪ್ಪಿಸಿ ವಿದ್ಯಾಸಂಸ್ಥೆಗಳ ಮೂಲಕ ಕೊಟ್ಟು ಆ ಮೇಲೆ ರೀಯಿಂಬರ್ಸ್ ಮಾಡುವ ವ್ಯವಸ್ಥೆ ಮಾಡಿದ್ದೇವೆ. ವಿದ್ಯಾರ್ಥಿಗಳ ವಿದ್ಯಾರ್ಜನೆ ದೆಸೆಯಿಂದ ಭರವಸೆಯನ್ನು ಕೂಡ ಈ ಮಾನ್ಯಸಭೆಗೆ ಕೊಡುತ್ತಿದ್ದೇನೆ.

ಶ್ರೀ ಕೆ. ಯಂಕಟಪ್ಪ.—ತಾವು ಯೂನಿವರ್ಸಿಟಿ ಹಾಸ್ಟಲ್‌ಗೆ ವಿದ್ಯಾರ್ಥಿವೇತನದ ಜೊತೆಯಲ್ಲಿ ಬೋರ್ಡಿಂಗಿಗೆ ವಿಶೇಷವೇತನ ಏನು ಕೊಡುತ್ತೀರಾ, ಸದರೀ ಹಾಸ್ಟಲ್‌ಗೆ ಕೊಡತಕ್ಕಂಥ ಹಣಕ್ಕಿಂತ ಹೆಚ್ಚಿಗೆ ಖರ್ಚು ಬಂದರೆ ಯಾವರೀತಿ ಮಾಡುತ್ತೀರಾ ? ಎರಡನೆಯದು ಜೂನಿಯರ್ ಕಾಲೇಜುಗಳಲ್ಲಿ ಒಂದೆರಡು ತಾಲ್ಲೂಕು ಮಂಡಲಿಗಳಲ್ಲಿ ಇರುವುದರಿಂದ, ಜೂನಿಯರ್ ಕಾಲೇಜ್ ಹಾಸ್ಟಲ್‌ಗಳಿಗೆ ಗುಲ್ಬರ್ಗ ಜಿಲ್ಲೆಯ ಅಫಜಲ್ ಪುರದಲ್ಲಿ 10 ಜನ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಟ್ಟಿದ್ದೇವೆಂದ ಏನು ಹೇಳುತ್ತೀರಾ, ಆ ಪ್ರಕಾರ ತಾವು ಕೊಡತಕ್ಕ ಬೋರ್ಡಿಂಗ್ ಚಾರ್ಜಸ್‌ನ್ನು ತಾಲ್ಲೂಕು ಬೋರ್ಡುಗಳಿಗೂ ಕೊಟ್ಟು, ಹೈಸ್ಕೂಲು ವಿದ್ಯಾರ್ಥಿನಿಲಯಗಳನ್ನು ನಡೆಸುವ ರೀತಿ ನಡೆಸುವುದಕ್ಕೆ ಅವರಿಗೂ ಆದೇಶ ಕೊಡುವುದಕ್ಕೆ ಆಗುತ್ತದೆಯೋ ?

ಶ್ರೀ ಎನ್. ರಾಚಯ್ಯ.—ಸ್ಥಳೀಯ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಜವಾಬ್ದಾರಿ, ದೀನದಲಿತರ ಹಾಗೂ ಹರಿಜನ ಗಿರಿಜನರ ಮಕ್ಕಳ ಜವಾಬ್ದಾರಿ ವಹಿಸುವುದಕ್ಕೆ ಸುತಾರಾಮ್ ಸಾಧ್ಯವಾಗಿಲ್ಲ. ಷೆಡ್ಯೂಲ್ಡ್ ಕಾಸ್ಟ್ಸ್ ಕಮಿಷನರ್ ಕೇಂದ್ರಸರ್ಕಾರದ ವರದಿಯಲ್ಲಿ ಕೆಲವು ವಿಚಾರ ಪ್ರಸ್ತಾಪಮಾಡಿ ಸ್ಪಷ್ಟವಾದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

4-30 P.M.

ಹರಿಜನ ಮತ್ತು ಗಿರಿಜನರ, ಹಿಂದುಳಿದ ವರ್ಗದವರ ವಿದ್ಯಾ ಪ್ರಗತಿಯನ್ನು ಹೆಚ್ಚಾಗಿ ಸಾಧಿಸಬೇಕಾದರೆ ರಾಜ್ಯಾಂಗದಲ್ಲಿ ಇರತಕ್ಕಂಥ ಆದೇಶದ ಪ್ರಕಾರ ಸ್ಥಳೀಯ ಸಂಸ್ಥೆಗಳಿಗೆ ಈ ಜವಾಬ್ದಾರಿಯನ್ನು ವಹಿಸಬಾರದು ಎಂದ ಸ್ಪಷ್ಟಪಡಿಸಿದ್ದೇನೆ. ಎಲ್ಲಿ ಇಂತಹ ಸೌಲಭ್ಯಗಳನ್ನು ನಾವು ಕೊಡಬೇಕೊ ಅಂತಹ ಕಡೆಗಳಲ್ಲಿ ಅವರು ಪ್ರತ್ಯೇಕವಾದಂಥ ಖಾಸಗೀ ಸಂಸ್ಥೆಗಳನ್ನು ಮಾಡಿಕೊಳ್ಳಲಿ ಅಥವಾ ವಿದ್ಯಾರ್ಥಿಗಳು ಸಂಘಗಳನ್ನು ಮಾಡಿಕೊಂಡು ಮುಂದೆ ಬಂದು ವಿದ್ಯಾ ಸೌಲಭ್ಯಗಳನ್ನು ಪಡೆಯುತ್ತೇವೆಂದು ಮುಂದೆ ಬಂದರೆ ಅವನ್ನು ನಾನು ಒಪ್ಪುತ್ತೇನೆಯೇ ಹೊರತು ಸ್ಥಳೀಯ ಸಂಸ್ಥೆಗಳು, ತಾಲ್ಲೂಕು ಬೋರ್ಡುಗಳು, ಪುರಸಭೆಗಳು ಇವುಗಳಿಗೆ ವಹಿಸಿದರೆ ಒಳ್ಳೆಯದು ಆಗುವ ಬದಲು ಅಡಚಣೆ ಆಗುತ್ತದೆಯೆಂದು ನನ್ನಗಮನಕ್ಕೆ ಬಂದಿದೆ. ಉದಾಹರಣೆಗೆ ಎಲ್ಲಾ ತಾಲ್ಲೂಕು ಬೋರ್ಡ್ ಅಧ್ಯಕ್ಷರು ಆಯಾ ತಾಲ್ಲೂಕು ಬೋರ್ಡ್ ಕ್ಷೇತ್ರದಲ್ಲಿ ಇರತಕ್ಕ ಹರಿಜನರ ಗಿರಿಜನರ ಹಾಸ್ಟಲ್‌ಗಳಿಗೆ ಒಂದು ಮ್ಯಾನೇಜಿಂಗ್ ಕಮಿಟಿಯನ್ನು ಅಧ್ಯಕ್ಷರೇ ಮಾಡಿದ್ದಾರೆಂದು ಅನೇಕ ಕಡೆಗಳಿಂದ ದೂರು ಬಂದಿದೆ. ವರ್ಷಗಟ್ಟಲೆ ಮೀಟಿಂಗನ್ನು ಮಾಡಿಲ್ಲ. ವಿದ್ಯಾರ್ಥಿಗಳನ್ನು ಸೇರಿಸುವಾಗ ಜನರಲ್ ಹಾಸ್ಟಲ್‌ನಲ್ಲಿ ಒಂದು ನೆಪ ಮಾಡಿ ಅನೇಕ ಅನ್ಯಾಯಗಳನ್ನು ರಾಜ್ಯಾಂಗಕ್ಕೆ ವಿರುದ್ಧವಾಗಿ ಮಾಡಿದ್ದಾರೆಂದು ನಾನು ಹೇಳುತ್ತೇನೆ. ಹರಿಜನರ ಹಾಸ್ಟಲ್‌ಗಳಿಗೆ ಬೇರೆಯವರ ಮಕ್ಕಳನ್ನು ಸೇರಿಸುವುದರಿಂದ ಹರಿಜನರಿಗೂ ಎಲ್ಲಾ ವರ್ಗದ ಜನರ ಬುದ್ಧಿ ಬರುತ್ತದೆ ಎನ್ನುವ ವಿಚಾರವನ್ನು ನಾನು ಒಪ್ಪತಕ್ಕವನಲ್ಲ ಎಂದು ಸ್ಪಷ್ಟಪಡಿಸುತ್ತೇನೆ. ಬೇರೆ ವರ್ಗದ, ಜನಾಂಗದ ಮಕ್ಕಳು 60 ರಿಂದ 70, 80 ಇರಲಿ, ಇಲ್ಲಿ ಹರಿಜರ ಮಕ್ಕಳು 10 ರಿಂದ 25ರ ವರೆಗೂ ಇಲ್ಲಿ ಸೇರಲಿ. ಬೇರೆ ವರ್ಗದ ಮಕ್ಕಳು ಹೆಚ್ಚಾಗಿ ಇರತಕ್ಕ ಕಡೆಗಳಲ್ಲಿ ಒಳ್ಳೆಯ

ವಾತಾವರಣದಲ್ಲಿ ಅವರು ವಿದ್ಯಾಭ್ಯಾಸ ಮಾಡುತ್ತಾ ಇದ್ದಾರೆ. ಹರಿಜನ ಮಕ್ಕಳು ಕೊಳಕು ಪ್ರದೇಶಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಒಂದು ವಾತಾವರಣ ಸಾಮಾಜಿಕವಾಗಿ ಸರಿ ಇಲ್ಲವೋ ಆ ಒಂದು ವಾತವರಣದಿಂದ ಬರತಕ್ಕ ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಜನರಲ್ ಹಾಸ್ಟಲ್‌ನಲ್ಲಿ ಬೇರೆ ವರ್ಗದವರು ಬಹು ಸಂಖ್ಯೆಯಲ್ಲಿ ಸೇರಿದ್ದಾರೆ. ಈ ಜನರಲ್ ಹಾಸ್ಟೆಲ್‌ನಲ್ಲಿ ನೂರು ಜನ ಹರಿಜನ ಮಕ್ಕಳು ಇದ್ದಾರೆ. ಅವರ ಹಾಸ್ಟಲ್‌ನಲ್ಲಿ ಹರಿಜನರು ಅಡಿಗೆ ಮಾಡುವವರು ಇದ್ದಾರೆ. ಮೈಸೂರು ಜಿಲ್ಲೆಯಲ್ಲಿ ಹರಿಜನರ ಹಾಸ್ಟಲ್‌ನಲ್ಲಿ ನೂರಕ್ಕೆ ನೂರು ಇದ್ದು ಅದು ಜನರಲ್ ಹಾಸ್ಟಲ್ ಆದ ತಕ್ಷಣ ಹೈಸ್ಕೂಲ್‌ನಲ್ಲಿ ಇದ್ದ ಪ್ಯೂನ್‌ನನ್ನು ಅಲ್ಲಿ ತಂದು ಇಟ್ಟರು. ಹರಿಜನ ಹೆಂಗಸರು, ಗಂಡಸರ ಕೈಯಲ್ಲಿ ಅಡಿಗೆ ಮಾಡಿಸಿದರೆ ಸವರ್ಣೀಯರು ಊಟ ಮಾಡಬಾರದು ಎಂದು ಈ ಜವಾನನನ್ನು ತೆಗೆದುಕೊಂಡು ಹೋಗಿ ಒಳಗಡೆ ಮಾಡುವಂತೆ, ಅವರು ಹೊರಗಡೆ ಮಾಡಬೇಕು ಎಂದು ಮಾಡಿದರು. ಆ ಮಟ್ಟದಲ್ಲಿ ಮಾಡಿದ್ದಾರೆ ಎಂದು ಫಿರ್ಯಾದಿಗಳು ಬಂದಿವೆ. ಆದುದರಿಂದ ಎಲ್ಲರಿಗೂ ಅನ್ವಯಿಸುವಂತೆ ಏನಾದರೂ ಇಜ್ಞೆ, ಕಾನೂನು, ನಿಯಮವನ್ನು ಮಾಡುವಾಗ ಯಾರಿಗೆ ನೇರವಾದ ಸಹಾಯವನ್ನು, ಅನುಕೂಲವನ್ನು ಒದಗಿಸಿಕೊಡಬೇಕೋ ಅಂತಹವರ ಮನಸ್ಸಿಗೆ ಯಾವತರಹದ ನೋವು ಆಗದ ರೀತಿಯಲ್ಲಿ, ಯಾವ ತರಹದಲ್ಲೂ ಅಪಮಾನ, ಅವರ ಗೌರವಕ್ಕೆ ಚ್ಯುತಿಬಾರದ ರೀತಿಯಲ್ಲಿ, ಇತರರಿಗೆ ಸಮಾನರು ಎಂದು ವಿದ್ಯಾರ್ಥಿ ದಿಶೆಯಲ್ಲಿ ಸೌಲಭ್ಯವನ್ನು ನೇರವಾಗಿ ಯಾರಿಗೆ ಕೊಡುತ್ತಾರೋ ಅದನ್ನು ಕೆಲವು ಭಾಗದ ಜನ ಪಡೆಯುವುದಕ್ಕೆ ಪ್ರಯತ್ನಪಟ್ಟು ಅವರಿಗೆ ಅಪಮಾನ ಆಗುವುದು, ಅನ್ಯಾಯ ಆಗುವುದನ್ನು, ತೊಂದರೆಯಾಗುವುದನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಕಮಿಷನ್‌ರವರು ಅಬ್‌ಸರ್ವ್ ಮಾಡಿದ್ದಾರೆ' Funds provided specifically for the welfare of Scheduled Castes and Scheduled Tribes in any Budget passed by a legislature shall not be diverted for other purposes. If they are diverted it is not only improper but it is unconstitutional also ಎಂದು ಹೇಳಿ ಇದನ್ನು ಮುಖ್ಯಮಂತ್ರಿಗಳ ಮತ್ತು ಹಣಕಾಸಿನ ಮಂತ್ರಿಗಳ ಗಮನಕ್ಕೆ ತಂದು ಕಳೆದ 5 ವರ್ಷಗಳಿಂದ ಒಂದು ಕೋಟಿ ರೂಪಾಯಿಗಳನ್ನು ಹರಿಜನರಿಗೆ ನಾವು ಖರ್ಚು ಮಾಡುತ್ತಿದ್ದೇವೆ. ನೂರಕ್ಕೆ 25 ಭಾಗ ಎಂದರೆ 25 ಲಕ್ಷ ರೂಪಾಯಿ ಒಂದು ವರ್ಷಕ್ಕೆ ಆಗಿದೆ. ಕಳೆದ 15 ವರ್ಷಗಳಿಂದ ಬೇರೆ ವರ್ಗಕ್ಕಿಂತ ಇವರಿಗೆ ಹೆಚ್ಚು ಕೊಡಬೇಕು ಎಂದು ನಿಯಮ ಮಾಡಿದುದರ ಫಲವಾಗಿ 1969-70, 1970-71, 1971-72ರಲ್ಲಿ ನಾನು ಮತ್ತೆ ಮಂತ್ರಿಯಾಗಿ ಬರುವುದಕ್ಕೆ ಮೊದಲು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಮಕ್ಕಳಿಗೆ ವಿಶೇಷವಾಗಿ ಖರ್ಚು ಮಾಡಿದ್ದಾರೆ. ಏನು ಮಾಡಿದರೂ ಕೂಡ ಟೀಕೆ ಮಾಡುವ ರೀತಿಯಲ್ಲಿ, ವಿರೋಧಪಕ್ಷದವರು ಸಾರ್ವಜನಿಕರ ಮುಖಾಂತರ ಜನ ಏನು ಟೀಕೆ ಮಾಡುತ್ತಾರೆ ಅದು ಸ್ಪಷ್ಟವಾಗಿ ಇರಬೇಕು. ಹರಿಜನರ ಹಾಸ್ಟಲ್‌ನಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ 80 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೇವೆ. 45ನೇ ಆರ್ಟಿಕಲ್ ಪ್ರಕಾರ ಎಲ್ಲಾ ಮಕ್ಕಳಿಗೂ ವಿದ್ಯಾ ಸೌಲಭ್ಯವನ್ನು ಕಡ್ಡಾಯವಾಗಿ, ಪುಕ್ಕಟೆಯಾಗಿ ಒದಗಿಸಬೇಕು. ರಾಜ್ಯಾಂಗ ಜಾರಿಗೆ ಬಂದ 10 ವರ್ಷದೊಳಗೆ ಅಥವಾ 25 ವರ್ಷದೊಳಗೆ ಈ ಸೌಲಭ್ಯವನ್ನು ಕೊಡಬೇಕು ಎನ್ನುವ ಆದೇಶ ರಾಜ್ಯ ಸರ್ಕಾರಕ್ಕೆ ಬಂದಿದೆ. 45ನೇ ಆರ್ಟಿಕಲ್ ಪ್ರಕಾರ Economic and Educational interest of the weaker sections in particular Scheduled Castes and Scheduled Tribes shall be protected and promoted and shall prevent all forms of exploitation and social injustice ಈ ಕಲಮ್ಸ್ ಪ್ರಕಾರವಾಗಿ ವಿದ್ಯಾ ಶಿಕ್ಷಣದ ಜವಾಬ್ದಾರಿಯನ್ನು ಇವತ್ತು ನಾವು ಏನು ಕಾಣುತ್ತಿದ್ದೇವೆ ಏನಾದರೂ ಕೂಡ ಈ ಫ್ಯಾಮಿಲಿ ಪ್ಲಾನಿಂಗ್ ಸಮಸ್ಯೆ, ಅಸ್ಪೃಶ್ಯತಾ ಸಮಸ್ಯೆ, ಜಾತೀಯತೆಯ ಸಮಸ್ಯೆ ಹೀಗೆ ನಾನಾ ತರಹದ ಸಮಸ್ಯೆಗಳು ಸಾಮಾಜಿಕವಾಗಿ, ಮಾನಸಿಕವಾಗಿ, ರಾಜಕೀಯವಾಗಿ ದೇಶದಲ್ಲಿ ಇದೆ ಇವತ್ತು ನಾವು 26ನೇ ವರ್ಷದ ಗಣರಾಜ್ಯದ ಕಾಲದಲ್ಲಿ ಇದ್ದೇವೆ. ನಮ್ಮ ರಾಜ್ಯದಲ್ಲಿ 69 ರಷ್ಟು ಜನ ಅವಿದ್ಯಾವಂತರು ಇದ್ದಾರೆ. ಅವರಿಗೆ ಈ ಸೌಲಭ್ಯಗಳು ಹೇಗೆ ದೊರಕುವುದಕ್ಕೆ ಸಾಧ್ಯ ಅವರಿಗೆ ನಾನಾ ತರಹದ ವಿದ್ಯಾ ಸೌಲಭ್ಯ, ಉದ್ಯೋಗ ಸೌಲಭ್ಯ, ಆರ್ಥಿಕ ಸೌಲಭ್ಯಗಳನ್ನು ಕೊಡಬೇಕು. ನಾನಾ ತರಹದ ಸೌಲಭ್ಯಗಳನ್ನು ಅವರಿಗೆ ಕೊಡಬೇಕಾಗುತ್ತದೆ. ಈ ವಿದ್ಯಾ ಪ್ರಚಾರ ಹೆಚ್ಚು ಹೆಚ್ಚಾಗಿ ಆಗಿ ಈ ಒಂದು ವರ್ಗದ ಜನಗಳಿಗೆ ಅವರ ಒಂದು ವರ್ಗದ ಹೆಣ್ಣು ಮಕ್ಕಳು ಗಂಡು ಮಕ್ಕಳು ಹೆಚ್ಚು ಹೆಚ್ಚಾಗಿ ವಿದ್ಯಾವಂತರಾಗಿ ಬಂದಾಗ ರಾಜ್ಯಾಂಗದತ್ತವಾದ ಸೌಲಭ್ಯಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ, ಈ ವಿದ್ಯಾರ್ಥಿಗಳ ವಿಚಾರಗಳಲ್ಲಿ ಪ್ರಭಾಕರ ರವರು ಪ್ರಸ್ತಾಪ ಮಾಡಿದ್ದಾರೆ. ಅವರು ಪ್ರಸ್ತಾಪ ಮಾಡಿರುವುದು ಚೆನ್ನಾಗಿ ಇತ್ತು. ನಾವು

ಸ್ಕಾಲರ್‌ಷಿಪ್‌ಗಳನ್ನು ಕೊಡುವಾಗ, ಸರ್ಕಾರಿ ಉದ್ಯೋಗಗಳನ್ನು ಕೊಡುವಾಗ ಈ ವರ್ಗದ ಜನರಿಗೆ ರಿಸರ್‌ವೇಷನ್ ಮಾಡಬೇಕೆಂದು ಮಾಡಿದೆ. 33ನೇ ಆರ್ಟಿಕಲ್ ಪ್ರಕಾರ ಇತ್ತೀಚೆಗೆ 3ನೇ ದರ್ಜೆ ಮತ್ತು 4ನೇ ದರ್ಜೆ ನೌಕರಿಗಳಿಗೆ ನೇಮಿಸುವಾಗ ಸ್ಥಳೀಯ ಸಂಸ್ಥೆಗಳಲ್ಲಿಸರ್ಕಾರದಲ್ಲಿ, ಸರ್ಕಾರಿ ಉದ್ಯಮಗಳಲ್ಲಿ ಮತ್ತು ಖಾಸಗೀ ಸಂಸ್ಥೆಗಳಲ್ಲಿ, ಸರ್ಕಾರದಿಂದ ಸಹಾಯ ಪಡೆಯುತ್ತಿರುವ ಸಂಸ್ಥೆಗಳಲ್ಲಿ ರಿಸರ್ವೇಷನ್‌ರೂಲ್ಸ್ ಅನುಸರಿಸಬೇಕೆಂದು ದೇವರಾಜ್ ಅರಸ್ ಸರ್ಕಾರದವರು ಮಾಡಿರುವುದು ಹಿಂದೆ ಯಾವಸರ್ಕಾರವೂ ಈ ರೀತಿ ತೆಗೆದುಕೊಂಡಿಲ್ಲ. ಈ ಒಂದು ಆಜ್ಞೆಯನ್ನು ಹಿಂದೆ ಯಾವ ಸರ್ಕಾರವೂ ಮಾಡಿಲ್ಲ. ಇಡೀ ಭಾರತದೇಶದಲ್ಲಿ ಯಾವ ರಾಜ್ಯಸರ್ಕಾರವು ಮಾಡಲಿಲ್ಲ. ಪ್ರೊಮೋಷನ್‌ನಲ್ಲಿಕೂಡ ರಿಸರ್ವೇಷನ್ ಕೊಡಬೇಕೆಂದು ಕೇಂದ್ರಸರ್ಕಾರದವರ ತೀರ್ಮಾನವಾಗಿದೆ. ಪಂಜಾಬ್ ಸರ್ಕಾರದಲ್ಲಿ ತೀರ್ಮಾನ ಮಾಡಿದ್ದಾರೆ. ಹರಿಯಾಣ ಸರ್ಕಾರದಲ್ಲೂ ಮಾಡಿದ್ದಾರೆ. ಉತ್ತರ ಪ್ರದೇಶದ ಸರ್ಕಾರದಲ್ಲೂ ಕೂಡ ಇದನ್ನು ಮಾಡಿದ್ದಾರೆ. ನಮ್ಮ ಸರ್ಕಾರದಲ್ಲೂ ಬೇಕೆಂದು ಕೇಂದ್ರ ಸರ್ಕಾರದವರಿಂದ ಆದೇಶ ಬಂದಿದೆ.

ಹಾಗೆಯೇ ಹುದ್ದೆಯ ಸೌಲಭ್ಯಗಳನ್ನು ಕೊಡಬೇಕಾದರೂಕೂಡ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ತರಬೇತಿ ಮಾಡಿದರೆ, ಉತ್ಪಾದನೆ ಮಾಡಿದರೆ, ಅವರಿಗೆ ವಿದ್ಯಾರ್ಹತೆಯನ್ನು ಗಳಿಸಿಕೊಟ್ಟರೆ, ಹುದ್ದೆಯ ಮಟ್ಟವನ್ನು ಅರಿತು ನಾವು ಏನು ಅರ್ಹತೆಯನ್ನು ನಿಗದಿ ಮಾಡುತ್ತೇವೆ ಅದರಂತೆ ಎಲ್ಲಿ ಅರ್ಹತೆಯನ್ನೂ ಹೊಂದಿ ಹೆಚ್ಚಿನ ಸಂಖ್ಯೆಯಲ್ಲಿ ಹುದ್ದೆಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. 16 (4)ನೇ ಆರ್ಟಿಕಲ್ ಪ್ರಕಾರ ಹಿಂದುಳಿದ ವರ್ಗದವರಿಗೆ ಪ್ರಾತಿನಿಧ್ಯ ಕೊಡಬೇಕು ಎಂದು ಇದೆ. ಅದು ಡೈರೆಕ್ಟಿವ್ ಪ್ರಿನ್ಸಿಪಲ್ ಅಲ್ಲ, ಅದು ಫಂಡಮೆಂಟಲ್ ರೈಟ್ಸ್‌ನಲ್ಲಿ ಬರುತ್ತದೆ. ಆದರೆ ಹರಿಜನ ಗಿರಿಜನರಿಗೆ ಪ್ರಾತಿನಿಧ್ಯವನ್ನು ಕೊಡುವ ವಿಚಾರ ಡೈರೆಕ್ಟಿವ್ ಪ್ರಿನ್ಸಿಪಲ್ಸ್‌ನಲ್ಲಿ ಬರುತ್ತದೆ. ಹರಿಜನ ಗಿರಿಜನರಿಗೆ ಪ್ರಾತಿನಿಧ್ಯವನ್ನು ಸರ್ವಿಸ್‌ನಲ್ಲಿ ಕೊಡಬೇಕಾದರೆ ರಾಜ್ಯ ಸರ್ಕಾರಗಳ ಅಥವಾ ಕೇಂದ್ರ ಸರ್ಕಾರದ ಪಬ್ಲಿಕ್ ಸರ್ವಿಸ್ ಕಮಿಷನ್ ಅನ್ನು ಕೂಡ ಕನ್‌ಸಲ್ಟ್ ಮಾಡಬೇಕಾಗಿಲ್ಲ ಎಂದು ಇದೆ. 1950ನೇ ಇಸವಿ ಜನವರಿ 26ನೇ ತಾರೀಖು ಸಂವಿಧಾನವನ್ನು ಜಾರಿಗೆ ತರಲಾಯಿತು. ಅದು ಜಾರಿಗೆ ಬಂದಲಾಗಾಯಿತು ಈ ಸ್ಕೀಂ ಜಾರಿಯಲ್ಲಿದೆ. 1950ನೇ ಇಸವಿಯಿಂದ 1974ನೇ ಇಸವಿಯ ಕೊನೆಯವರೆಗೂ ಯಾವ ಮುಖ್ಯ ಮಂತ್ರಿಯೂ ಕೂಡ ಕರ್ನಾಟಕ ರಾಜ್ಯದಲ್ಲಿ ಆ ಒಂದು ಕಮಿಟಿಗೆ ಬೆಲೆಯನ್ನು ಕೊಟ್ಟಿರಲಿಲ್ಲ, ಯಾವ ಲಾ ಸೆಕ್ರೆಟರಿಯಾಗಲೀ, ಯಾವ ಚೀಫ್ ಸೆಕ್ರೆಟರಿಯಾಗಲೀ ಅದನ್ನು ಸರಿಯಾಗಿ ಇಂಟರ್‌ಪ್ರಿಟ್ ಮಾಡಲಿಕ್ಕೆ ಹೋಗಿಲ್ಲ. ನಾನು ಮಂತ್ರಿಯಾಗಿ ಬಂದ ನಾಲ್ಕೈದು ತಿಂಗಳಿನಲ್ಲಿಯೇ ಮುಖ್ಯ ಮಂತ್ರಿಗಳು ಮತ್ತು ಕ್ಯಾಬಿನೆಟ್ ಕೊಲೀಗ್ಸ್ ಸಂಗಡ ಹೋರಾಟ ಮಾಡಿದ್ದರ ಪರಿಣಾಮವಾಗಿ ಅದಕ್ಕೆ ಬೆಲೆ ಬಂತು. ನಾನು ಮೊದಲೇ ಹೇಳಿದಂತೆ ಇಂಥ ಅಜ್ಞೆಯನ್ನು ಇಡೀ ಭಾರತ ದೇಶದಲ್ಲಿ, ನನಗೆ ತಿಳಿದಮಟ್ಟಿಗೆ, ಯಾವ ರಾಜ್ಯ ಸರ್ಕಾರಗಳೂ ಮಾಡಿಲ್ಲ, ಕೇಂದ್ರ ಸರ್ಕಾರವೂ ಕೂಡ ಮಾಡಿಲ್ಲ. ಇದನ್ನು ಶ್ರೀ ಕೆ. ಪ್ರಭಾಕರ್ ಅವರಿಗೆ ಮತ್ತು ಇತರ ಸ್ನೇಹಿತರಿಗೆ ಹೇಳುತ್ತೇನೆ. ಕೇಂದ್ರದಿಂದ ಉಮಾಶಂಕರ ದೀಕ್ಷಿತ್ ಅವರು ಬೆಂಗಳೂರಿಗೆ ಬಂದಿದ್ದಾಗ ನಾನು ಇಂಥಿಂಥದ್ದನ್ನು ಮಾಡಿದ್ದೇನೆಂದು ಹೇಳಿದಾಗ ಆ ಒಂದು ವರದಿಯನ್ನು ತಮಗೂ ಕಳುಹಿಸಿಕೊಡುವಂತೆ ಹೇಳಿದರು. ಆ ವರದಿಯನ್ನು ಪ್ರಿಂಟ್ ಮಾಡಿಸಿ ಎಲ್ಲರಿಗೂ ಹಂಚಿದ್ದೇನೆ. ಹರಿಜನಗಿರಿಜನರಿಗೆ ಸಂಬಂಧಪಟ್ಟ ಹಾಗೆ 10—11 ತಿಂಗಳಲ್ಲಿ ಸುಮಾರು 40—50 ಆಜ್ಞೆಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಹೊರಡಿಸಿ ಜಾರಿಗೆ ಕೊಟ್ಟು ಅದೆಲ್ಲವನ್ನೂ ಕೂಡ ವರದಿಯಲ್ಲಿ ಸೇರಿಸಿದ್ದೇನೆ.

ತಮಗೆಲ್ಲ ಗೊತ್ತಿದ್ದ ಹಾಗೆ ಪ್ರಾಥಮಿಕ ಶಾಲೆ ಆದರಲ್ಲಿಯೂ ಶಿಶುವಿಹಾರಗಳು ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಾಗಿ ಆಗಬೇಕು. ನಾನು ಮಂತ್ರಿಯಾಗಿ ಬಂದ ಮೇಲೆ ಪಂಚಾಯಿತಿಗಳು, ಟೌನ್ ಪಂಚಾಯಿತಿಗಳು, ತಾಲ್ಲೂಕು ಬೋರ್ಡುಗಳು ಇವುಗಳಲ್ಲಿ ನೂರಕ್ಕೆ 18 ಭಾಗದಷ್ಟು ಹಣವನ್ನು ಪ್ರತಿವರ್ಷವೂ ಕೂಡ ಹರಿಜನರ ಮತ್ತು ಗಿರಿಜನರ ಅಭಿವೃದ್ಧಿಗಾಗಿ ಮೀಸಲು ಇಡಬೇಕು, ಪ್ರಾಥಮಿಕ ಶಾಲೆಗೆ ಹೋಗತಕ್ಕ ಪ್ರತಿ ಹರಿಜನ ಗಿರಿಜನರ ಮಗುವಿಗೂ ಇನ್‌ಸೆಂಟಿವ್ ಸ್ಕಾಲರ್‌ಷಿಪ್ ಕೊಡಬೇಕು ಎಂದು ಆಜ್ಞೆ ಮಾಡಿದ್ದೇನೆ. ಸಂಬಂಧಪಟ್ಟ ಶಿಕ್ಷಣ ಇಲಾಖೆಯನ್ನು ಕೂಡ ಸಾಕಾದಷ್ಟು ಹಣವನ್ನು ಒದಗಿಸಬೇಕು ಎಂದು ಕೇಳಿದ್ದೇನೆ. ಪ್ರಿಪ್ರೈಮರಿ ಶಾಲೆಗಳು ಹರಿಜನ ಗಿರಿಜನರಿಗೆ ಬಹಳ ಮುಖ್ಯ. ಕೊಳಕು ಪ್ರದೇಶದಲ್ಲಿ ವಾಸ ಮಾಡತಕ್ಕ ಹರಿಜನರು ಮತ್ತು ಗುಡ್ಡ ಪ್ರದೇಶಗಳಲ್ಲಿ ವಾಸ ಮಾಡುವ ಗಿರಿಜನರು ಇವರ ಮಕ್ಕಳಿಗೆ ಶಿಕ್ಷಣ ಪಡೆಯಬೇಕು ಎನ್ನುವ ಮನೋಭಾವವಿಲ್ಲ. ಅಂಥ ಮನೋಭಾವ ಸೃಷ್ಟಿಯಾಗಬೇಕಾಗಿದೆ. ಅದು ಆಗಬೇಕಾದರೆ ಮೊಟ್ಟ ಮೊದಲು ಆ ದಿಸೆಯಲ್ಲಿ ತಯಾರು ಮಾಡಬೇಕಾದರೆ ನಾವು ಶಿಶುವಿಹಾರಗಳನ್ನು ಮಾಡಬೇಕಾಗುತ್ತದೆ. ಹಿಂದೆ ನಾನು ಸಚಿವನಾಗಿದ್ದಾಗ 300 ಶಿಶುವಿಹಾರಗಳನ್ನು ಮಾಡಿಸಿದ್ದೆ.

ಈಚೆಗೆ ನಾನು ಪುನಃ ಬಂದ ಮೇಲೆ 100 ಶಿಶು ವಿಹಾರಗಳನ್ನು ಮಂಜೂರು ಮಾಡಿ ಈ ತಿಂಗಳಲ್ಲಿ ಜಾರಿಗೆ ಕೊಡುವವನಿದ್ದೇನೆ. ಆ ಬಗ್ಗೆ ಈಗಾಗಲೇ ಡೈರೆಕ್ಟರಿಗೆ ಆದೇಶವನ್ನು ಕಳುಹಿಸಿದ್ದೇನೆ.

ಕಳೆದ ವರ್ಷ 80 ಕಮ್ಯೂನಿಟಿ ಹಾಲ್ಸ್ ಮಾಡಿಸಿದ್ದೇನೆ. ಗ್ರಾಮಾಂತರ ಪ್ರದೇಶಗಳಿಗೆ ಹೋದರೆ ಹರಿಜನ ಗಿರಿಜನ ಕೇರಿಗಳಲ್ಲಿ ಕುಳಿತುಕೊಳ್ಳುವುದಕ್ಕೆ ಒಂದು ಕಾಮನ್ ಹಾಲ್ ಇಲ್ಲ. ಎಲ್ಲ ಕಡೆಗಳಿಂದಲೂ ಕೂಡ ವರದಿಯನ್ನು ತರಿಸಿಕೊಂಡು ಹೋದ ಸಾರಿ 80 ಕಮ್ಯೂನಿಟಿ ಸೆಂಟರ್ ಬಿಲ್ಡಿಂಗ್ಸ್ ಮಂಜೂರು ಮಾಡಿದೆ. ಈಗ 100 ಕಮ್ಯೂನಿಟಿ ಸೆಂಟರ್ ಬಿಲ್ಡಿಂಗ್ ಮಂಜೂರು ಮಾಡಿದ್ದೇನೆ. ಹೋದ ಸಲ 5000 ರೂಪಾಯಿ ಕೊಟ್ಟಿದ್ದು ಈ ವರ್ಷ ಹತ್ತು ಸಾವಿರ ರೂಪಾಯಿ ಪ್ರಕಾರ ಮಂಜೂರು ಮಾಡಿದ್ದೇನೆ. ಈಗಾಗಲೇ ಆ ಬಗ್ಗೆ ಆರ್ಡರ್ ಹೊರಟಿರಬಹುದು. ಮಾನ್ಯ ಸದಸ್ಯರು ಅನೇಕರು ಸೂಚಿಸಿದಂತೆ ಎಲ್ಲ ಕಡೆಯೂ ಕಮ್ಯೂನಿಟಿ ಹಾಲ್‌ಗಳನ್ನು ಕಟ್ಟಬೇಕು ಎಂದು ನನ್ನ ಮನಸ್ಸು. 1962ರಲ್ಲಿ ನಾನು ಸಚಿವ ಸ್ಥಾನವನ್ನು ಬಿಟ್ಟ ಮೇಲೆ 1973ರ ವರೆಗೂ 11 ವರ್ಷ ಕಾಲದಲ್ಲಿ ಈ ಬಗ್ಗೆ ಏನೂ ಮಾಡಿಲ್ಲವೆಂದೇ ಹೇಳಬೇಕು. ಮಕ್ಕಳ ಶಿಕ್ಷಣ ಮತ್ತು ಇತರ ವಿಚಾರಗಳಲ್ಲಿ ಈ ಅವಧಿಯಲ್ಲಿ ಏನೂ ಗಮನ ಕೊಟ್ಟಿಲ್ಲ. ಹಿಂದೆ ಇದ್ದ ಸರ್ಕಾರಗಳು ರಾಜ್ಯಾಂಗವನ್ನು ಹೇಗೆ ಅಲಕ್ಷ್ಯ ಮಾಡಿದ್ದಾರೆನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಿನ್ನೆಯ ದಿವಸ ಶ್ರೀ ದೇವೇಗೌಡರು ಮಾತನಾಡುತ್ತ ಹರಿಜನರಿಗೆ ಏನೂ ದೊರೆಯುತ್ತಿಲ್ಲವೆಂದು ಹೇಳಿದರು. ನನಗೆ ತಿಳಿದ ಮಟ್ಟಿಗೆ ಎಷ್ಟು ಜನ ಮಕ್ಕಳು ಈ ಹೊತ್ತು ಪ್ರಾಥಮಿಕ ಶಾಲೆಗಳಲ್ಲಿ ಸೇರಲಿ, 15-20 ಮಕ್ಕಳಿಗೆ ಒಂದು ಹಾಸ್ಟಲ್ ಮತ್ತು ಶಾಲೆ ಮಾಡಲು ಖಾಸಗಿಯವರು ಮುಂದೆ ಬಂದರೆ ನಾನು ಅವರಿಗೆ ಗ್ರ್ಯಾಂಟ್ ಕೊಡುತ್ತೇನೆ ಸರ್ಕಾರವೇ ಮಾಡಬೇಕು ಎಂದರೆ 20 ಮಕ್ಕಳನ್ನು ಒದಗಿಸಿದರೆ ಸಮಾಜ ಕಲ್ಯಾಣ ಇಲಾಖೆ ಅಂಥ ಹಾಸ್ಟಲ್ ಮಂಜೂರು ಮಾಡುವುದಕ್ಕೆ ತಯಾರಿದೆ. ಅಸ್ಪೃಶ್ಯರಾದ ಹರಿಜನ ಗಿರಿಜನರ ಸಮಸ್ಯೆ ವಿಶೇಷವಾದ ಸಮಸ್ಯೆ. ಇನ್ನು ಯಾವ ಸಮಸ್ಯೆ ಕೂಡ ಇಲ್ಲ. ಅವರು ಬುದ್ಧಿವಂತರಾಗಿ ಅವರು ಸ್ವಶಕ್ತಿಯಿಂದ, ಅವರ ವಿಶ್ವಾಸದಿಂದ. ಸ್ವಪ್ರಯತ್ನದಿಂದ ಅವರ ಸಮಸ್ಯೆಗಳನ್ನು ಬಗೆಹರಿಸಿಕೊಂಡು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಕೊಡತಕ್ಕ ಎಲ್ಲ ಅವಕಾಶಗಳನ್ನೂ ಉಪಯೋಗಿಸಿಕೊಳ್ಳುವಂತಾಗಬೇಕು. ಅವರನ್ನು ಅವಿದ್ಯಾವಂತರನ್ನಾಗಿಟ್ಟು ಮೆಟೀರಿಯಲ್ ಆಗಿ ಏನು ಕೊಟ್ಟರೂ ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ತಿಳಿದುಕೊಂಡು ಅವರನ್ನು ವಿದ್ಯಾವಂತರನ್ನಾಗಿ ಮಾಡುವ ದಿಸೆಯಲ್ಲಿ ಹೆಚ್ಚಿನ ಹಣವನ್ನು ಖರ್ಚು ಮಾಡುತ್ತಿದ್ದೇನೆ. ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಯಾವುದೇ ಸಮಸ್ಯೆಯನ್ನು ನನ್ನ ಮುಂದೆ ತಂದರೂ ಕೂಡ ಅದನ್ನು ಕೂಡಲೇ ಬಗೆಹರಿಸುತ್ತೇನೆನ್ನುವ ಭರವಸೆಯನ್ನು ಕೊಡುತ್ತೇನೆ.

ಹುದ್ದೆಗಳ ವಿಷಯ. 1962ನೇ ಇಸವಿಯಲ್ಲಿ ನಾನು ಸಚಿವ ಸ್ಥಾನವನ್ನು ಬಿಟ್ಟಾಗ ಸಾಮಾನ್ಯವಾಗಿ ಇಂಜಿನಿಯರಿಂಗ್ ಪದವೀಧರನಿರಲಿ, ವೈದ್ಯಕೀಯ ಪದವೀಧರನಿರಲಿ, ಸಾಮಾನ್ಯವಾಗಿ ಬಿ.ಎ. ಅಥವಾ ಎಂ. ಎ. ಓದಿರುವವರಿರಲಿ, ಅವರಲ್ಲಿ ಅಲ್ಪಭಾಗವನ್ನು ಬಿಟ್ಟರೆ ಉಳಿದವರೆಲ್ಲ ಉದ್ಯೋಗ ದೊರಕಬೇಕು ಎನ್ನುವಂಥ ಅವಕಾಶವಿತ್ತು. 1962 ರಿಂದ 1971ನೇ ಇಸವಿಯವರೆಗೆ 10—11 ಸಾವಿರ ಜನ ಗಂಡು ಮಕ್ಕಳು ಹೆಣ್ಣು ಮಕ್ಕಳು ಎಸ್.ಎಸ್.ಎಲ್.ಸಿ. ಗೆ ಮೇಲ್ಪಟ್ಟು ಓದಿರುವವರಿಗೆ ಉದ್ಯೋಗವನ್ನು ಒದಗಿಸಿಕೊಟ್ಟಿಲ್ಲ. ಈ ಅವಧಿಯಲ್ಲಿದ್ದಂಥ ಸರ್ಕಾರಗಳು. ವಿದ್ಯಾಭ್ಯಾಸವನ್ನು ಒದಗಿಸಿ, ಒಂದೆರಡು ವರ್ಷದೊಳಗೆ ಎಷ್ಟು ಜನ ಹತ್ತನೇ ಸ್ಟಾಂಡರ್ಡ್ ಪಾಸ್ ಮಾಡಿಕೊಂಡು ಕೆಲಸ ಬೇಕು ಎಂದು ಮುಂದೆ ಬರುತ್ತಾರೆ ಅವರೆಲ್ಲರಿಗೂ ಕೂಡ ಉದ್ಯೋಗವನ್ನು ಒದಗಿಸುವ ಅವಕಾಶವನ್ನು ನಮ್ಮ ಸರ್ಕಾರ ಮಾಡಿದೆ ಎಂದು ನಾನು ಬಹಳ ಹೆಮ್ಮೆಯಿಂದ ಈ ದೇಶದ ಜನತೆಯ ಮುಂದೆ ಮತ್ತು ತಮ್ಮ ಮುಂದೆ ಇಡುತ್ತಿದ್ದೇನೆ.

ಇನ್ನು ಇತ್ತೀಚೆಗೆ ನಾನು ಕ್ಯಾಬಿನೆಟ್‌ನಲ್ಲಿ ನನ್ನ ಸಹೋದ್ಯೋಗಿಗಳೊಡನೆ ಹೋರಾಟ ಮಾಡಿದ ಮೇಲೆ ಪ್ರತಿವರ್ಷ 157 ಕ್ಲಾಸ್-1 ಕ್ಲಾಸ್-2 ಪೋಸ್ಟುಗಳನ್ನು ನೇರವಾಗಿ ನೇಮಕ ಮಾಡಿಕೊಳ್ಳಬೇಕೆಂದು ತೀರ್ಮಾನವಾಗಿದೆ. ಇದರಲ್ಲಿ ಹರಿಜನ ಮತ್ತು ಗಿರಿಜನರಿಗೆ ಸೇಕಡ 18 ಭಾಗ ಕಾನೂನುಬದ್ಧವಾಗಿ ರಾಜ್ಯಾಂಗ ಬದ್ಧವಾಗಿ ಸಿಗುತ್ತದೆ. 196 ರಲ್ಲಿ ನಾನು ಸಚಿವನಾಗಿದ್ದಾಗ ಪ್ರತಿವರ್ಷ ಈ ರೀತಿ ನೂರು ಜನರನ್ನು ನೇರವಾಗಿ ನೇಮಕ ಮಾಡಿಕೊಳ್ಳಬೇಕೆಂದು ತೀರ್ಮಾನ ಮಾಡಲಾಗಿತ್ತು. ಆದರೆ ಅಲ್ಲಿಂದ ಇಲ್ಲಿಯವರೆಗೆ ಈ ರೀತಿ ನೇಮಕಗಳು ಸಾಕಷ್ಟು ಪ್ರಮಾಣದಲ್ಲಿ ಆಗಿರಲಿಲ್ಲ. ಈ ಪದ್ಧತಿಯನ್ನು ಪಂಜಾಬ್ ಸರ್ಕಾರದವರು ಅನುಸರಿಸುತ್ತಿದ್ದಾರೆ. ನಾನು ಅಧಿಕಾರಕ್ಕೆ ಬಂದ ಮೇಲೆ ಅನೇಕ ಹುದ್ದೆಗಳನ್ನು ಪೀಸ್‌ಮೀಲ್ ಆಗಿ ಭರ್ತಿ ಮಾಡಿದ್ದೇನೆ. 50 ಜನ ತಹಸೀಲ್‌ದಾರರುಗಳಿಗೆ ಇನ್—ಸರ್ವಿಸ್ ಟ್ರೈನಿಂಗ್ ಕೊಡಬೇಕೆಂದ

ತೀರ್ಮಾನ ಮಾಡಿದ್ದೇವೆ. ಇನ್ನು ಮುಂದೆ ಪ್ರತಿವರ್ಷ 157 ಜನರನ್ನು ಪ್ರೊಬೇಷನರ್ಸ್ ಆಗಿ ನೇಮಕ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದರಿಂದ 18 ಪರ್ಸೆಂಟ್ ಹುದ್ದೆಗಳು ದೊಡ್ಡ ದೊಡ್ಡ ಪೋಸ್ಟ್‌ಗಳಲ್ಲಿಯೂ ಈ ಜನಾಂಗದವರಿಗೆ ಸಿಗುವುದಕ್ಕೆ ಅವಕಾಶವಾಗುತ್ತದೆ. ಇಂತಹ ಒಂದು ಆಜ್ಞೆಯನ್ನು ಹಿಂದೆ ಯಾವ ಸರ್ಕಾರ ಕೂಡ ಮಾಡಿರಲಿಲ್ಲ. ಮಾನ್ಯ ದೇವೇಗೌಡರು ಈಗ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಅವರಿಗೆ ನಾನು ಚೆನ್ನಾಗಿ ಇದನ್ನು ಅರ್ಥ ಮಾಡಿ ಹೇಳುತ್ತಿದ್ದೆ. ಹಾಸ್ಟೆಲ್ ಕಟ್ಟಡಗಳ ಬಗ್ಗೆ ಹೇಳಬೇಕೆಂದರೆ, ಬೆಂಗಳೂರು ನಗರದಲ್ಲಿ ಮಾಜೀ ರಾಷ್ಟ್ರಪತಿಗಳಾದ ಶ್ರೀಮಾನ್ ವಿ. ವಿ. ಗಿರಿಯವರು ಒಂದು ಹಾಸ್ಟೆಲ್ ಕಟ್ಟಡಕ್ಕೆ ಫೌಂಡೇಷನ್ ಹಾಕಿದರು. *ಅದಕ್ಕೆ 19 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇನ್ನೊಂದು ಕಡೆ ಹಾಸ್ಟೆಲ್ ಕಟ್ಟಡ ಕಟ್ಟಿಸಲು 13 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಗುಲ್ಬರ್ಗದಲ್ಲಿ ಎರಡು-ಮೂರು ಹಾಸ್ಟೆಲ್‌ಗಳನ್ನು ಕಟ್ಟಿಸಲಾಗುತ್ತಿದೆ. ಅದೇ ಜಿಲ್ಲೆಯಲ್ಲಿ ಮತ್ತೊಂದು ಕಡೆ 5 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮತ್ತೊಂದು ಹಾಸ್ಟೆಲ್ ಕಟ್ಟಡ ಕಟ್ಟಿಸಿಕೊಡುತ್ತೇನೆಂದು ಭರವಸೆ ಕೊಟ್ಟು ಬಂದಿದ್ದೇನೆ. ಮೈಸೂರು ಸಿಟಿಯಲ್ಲಿ 7 ಲಕ್ಷ ರೂಪಾಯಿ ವೆಚ್ಚದಲ್ಲಿ ಒಂದು ಕಟ್ಟಡವನ್ನು ಕಟ್ಟಿದ್ದೇವೆ. ಈ ತಿಂಗಳ 5ನೇ ತಾರೀಖು ಬೆಳಗಾಂನಲ್ಲಿ ನಮ್ಮ ಮುಖ್ಯಮಂತ್ರಿಗಳು ಒಂದು ಹಾಸ್ಟೆಲ್ ಕಟ್ಟಡಕ್ಕೆ ಫೌಂಡೇಷನ್ ಹಾಕಿದರು. ನಾನು ಅಂದು ಆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದೆ. ಆ ಕಟ್ಟಡಕ್ಕೆ 5 ಲಕ್ಷ ರೂಪಾಯಿಗಳನ್ನು ಕೊಡಲು ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. 1963ನೇ ಇಸವಿಯಿಂದ ಇಲ್ಲಿಯವರೆಗೆ ಪ್ರತಿವರ್ಷ ಹತ್ತು ಹಾಸ್ಟೆಲ್ ಕಟ್ಟಡಗಳನ್ನು ಕಟ್ಟಿಸಿಕೊಂಡು ಬಂದಿದ್ದರೂ ಸಹ ಇಲ್ಲಿಯವರೆಗೆ 110 ಹಾಸ್ಟೆಲ್ ಕಟ್ಟಡಗಳಾಗುತ್ತಿದ್ದವು. ಅದಕ್ಕೆ ಅವಕಾಶವಿದ್ದರೂ ಸಹ ರಾಜ್ಯ ಸರ್ಕಾರದವರು ಹಣ ಖರ್ಚು ಮಾಡಲಿಲ್ಲ. ಮತ್ತು ಕೇಂದ್ರ ಸರ್ಕಾರದಿಂದ ಈ ಬಾಬಿಗೆ ಹಣ ಬಂದರೂ ಸಹ ಜಿಲ್ಲಾಧಿಕಾರಿಗಳಿಂದ ವರದಿ ಬರಲಿಲ್ಲವೆಂಬ ಕಾರಣದಿಂದ ಹಣ ಖರ್ಚು ಮಾಡದೆ ಆ ಹಣವೆಲ್ಲಾ ಲ್ಯಾಪ್ಸ್ ಆಯಿತು. ಆದರೆ ನಾವು ನಮ್ಮ ಕಾಲದಲ್ಲಿ ಒಂದು ರೂಪಾಯಿ ಕೂಡ ಲ್ಯಾಪ್ಸ್ ಆಗುವುದಕ್ಕೆ ಅವಕಾಶ ಕೊಡುವುದಿಲ್ಲವೆಂಬ ಭರವಸೆಯನ್ನು ಕೊಡುತ್ತೇನೆ, ಈ ಬಾಬಿಗೆ ಇನ್ನೂ ಹೆಚ್ಚು ಹಣ ಕೊಡಲು ನಮ್ಮ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳು ಬಹಳ ಉದಾರ ಮನಸ್ಸಿನಿಂದ ಇದ್ದಾರೆ. ಮಾನ್ಯ ಚನ್ನಬಸಪ್ಪನವರ ಒಂದು ಸಹಕಾರವಿದ್ದರೆ ನಾನು ಎಲ್ಲ ಕಡೆಗಳಲ್ಲಿಯೂ ಹಾಸ್ಟೆಲ್ ಕಟ್ಟಡಗಳನ್ನು ಕಟ್ಟಿಸಿಕೊಡುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ನಮ್ಮ ಸೊಂಡೂರಿನಲ್ಲಿಯೂ ಒಂದು ಕಟ್ಟಿಸಿಕೊಡಿ.

ಶ್ರೀ ಎನ್. ರಾಚಯ್ಯ.—ಸೊಂಡೂರಿನಲ್ಲಿಯೂ ಕಟ್ಟಿಸಿ ಕೊಡುತ್ತೇನೆ. ನಮ್ಮ ಉಪಾಧ್ಯಕ್ಷರ ಕ್ಷೇತ್ರವಾದ ನೂಪದಲ್ಲಿಯೂ ಕಟ್ಟಿಸಿಕೊಡುತ್ತೇನೆ. ಅದರಲ್ಲಿ ಯಾವ ಭಿನ್ನಾಭಿಪ್ರಾಯವೂ ಬೇಡ.

ಇನ್ನು ಹರಿಜನ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವ ಬಗ್ಗೆ ನಾವು ವಿಶೇಷವಾದಂಥ ಆದ್ಯತೆ ಕೊಡುತ್ತಿದ್ದೇವೆ. ಈ ವರ್ಷ ಅಂತರ ರಾಷ್ಟ್ರೀಯ ಮಹಿಳಾ ವರ್ಷವೆಂದು ಮೊನ್ನೆತಾನೆ ಘೋಷಣೆ ಮಾಡಲಾಗಿದೆ. ಪುರುಷರಿಗೆ ಏನೇನು ಅವಕಾಶಗಳು ಮತ್ತು ಹಕ್ಕುಬಾಧ್ಯತೆಗಳು ಇವೆಯೋ ಅವುಗಳೆಲ್ಲವೂ ಮಹಿಳೆಯರಿಗೂ ದೊರೆಯಬೇಕೆಂಬ ಆನಿಕೆಯನ್ನು ಸರ್ಕಾರ ಹೊಂದಿದೆ. ಈ ವಿಷಯವನ್ನು ನಾನು ನಮ್ಮ ಅಧ್ಯಕ್ಷರ ಸಮ್ಮುಖದಲ್ಲಿಯೇ ಘೋಷಣೆ ಮಾಡಿದ್ದೇನೆ. ಈ ವಿಚಾರದಲ್ಲಿ ನಮ್ಮ ರಾಜ್ಯವು ಯಾವ ರಾಜ್ಯಕ್ಕೂ ಹಿಂದೆ ಬೀಳದೆ ಪ್ರತಿಯೊಂದು ಕ್ಷೇತ್ರದಲ್ಲಿರುವ ಎಲ್ಲ ವರ್ಗದ ಜನರಿಗೂ ಸಹ ಎಲ್ಲ ತರಹದ ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಅವರು ಯಾವ ಜಾತಿಯ ಜನರೇ ಆಗಿರಲಿ, ಯಾವ ವರ್ಗದ ಜನರೇ ಆಗಿರಲಿ ಯಾರು ನಿರ್ಗತಿಕರಾಗಿದ್ದಾರೆ, ಯಾರು ಭಿಕ್ಷುಕರಾಗಿದ್ದಾರೆ, ಯಾರು ಕುರುಡ ಕುಂಟರಾಗಿದ್ದಾರೆ ಅಂತಹವರೆಲ್ಲರಿಗೂ ಸಹ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಎಲ್ಲ ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂದು ಸರ್ಕಾರ ಒಂದು ಕಾರ್ಯಕ್ರಮ ಹಾಕಿಕೊಂಡು ಅದರಂತೆ ಕಾರ್ಯಗತಗೊಳಿಸಲು ತೀರ್ಮಾನ ಮಾಡಿದೆ. ಇಂತಹವರ ವಿಚಾರದಲ್ಲಿ ಗಾಂಧೀಜಿಯವರ ಮನಸ್ಸಿನಲ್ಲಿ ಏನಿತ್ತೋ, ಅವರು ಏನು ಕನಸು ಕಂಡಿದ್ದರೋ ಅದನ್ನು ಈಡೇರಿಸಲು ನಾವು ಪ್ರಯತ್ನಪಡುತ್ತಿದ್ದೇವೆ. ಮುಖ್ಯವಾಗಿ ಹೆಣ್ಣುಮಕ್ಕಳ ಹಾಸ್ಟೆಲ್ ಕಟ್ಟಡಗಳಿಗೆ ಆದ್ಯತೆ ಕೊಡುತ್ತಿದ್ದೇವೆ. ಇವರ ಹಾಸ್ಟೆಲ್ ಕಟ್ಟಡಗಳಿಗೆ ಯಾವ ಕಡೆಯಿಂದ ಬೇಡಿಕೆ ಬಂದರೂ ಸಹ ಅದಕ್ಕೆ ಮೊದಲು ಆದ್ಯತೆ ಕೊಟ್ಟು ಹಣವನ್ನು ಮಂಜೂರು ಮಾಡುತ್ತೇನೆ.

ಶ್ರೀ ಕೆ. ಯಾಂಕಟಪ್ಪ.—ತಾವು ಈಗ ಜಿಲ್ಲಾ ಮಟ್ಟದಲ್ಲಿ ಹಾಸ್ಟಲ್ ಕಟ್ಟಡಗಳನ್ನು ಕಟ್ಟಿಸುವ ಬಗ್ಗೆ ಪ್ರಸ್ತಾಪ ಮಾಡಿದಿರಿ. ಮತ್ತು ಮಾನ್ಯ ಹಣಕಾಸಿನ ಮಂತ್ರಿಗಳ ಕ್ಷೇತ್ರವಾದ ಸೊಂಡೂರಿನಲ್ಲಿ ಒಂದು ಹಾಸ್ಟಲ್ ಕಟ್ಟಡವನ್ನು ಕಟ್ಟಿಸಿಕೊಡಲು ವಾಗ್ದಾನ ಮಾಡಿದಿರಿ. ಅದೇ ರೀತಿ ನನ್ನ ಕ್ಷೇತ್ರಕ್ಕೂ ವಾಗ್ದಾನ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ನಿಮ್ಮ ಕ್ಷೇತ್ರಕ್ಕೂ ಕೊಡೋಣ, ಎಲ್ಲ ಕ್ಷೇತ್ರಗಳಿಗೂ ಕೊಡೋಣ. ಆದರೆ ಕಟ್ಟಡ ಕಟ್ಟಿಸಲು ನೀವು ಸೈಟ್‌ಗಳನ್ನು ದೊರಕಿಸಿ ಕೊಡಬೇಕು ಮತ್ತು ಆ ಬಗ್ಗೆ ಪ್ಲಾನ್ ಮತ್ತು ಎಸ್ಟಿಮೇಟ್ ಜಾಗ್ರತೆ ಬಂದರೆ ಜಾಗ್ರತೆ ಹಣ ಮಂಜೂರು ಮಾಡಬಹುದು.

ಶ್ರೀ ಕೆ. ಯಾಂಕಟಪ್ಪ.—ಆ ಕೆಲಸವನ್ನು ತಮ್ಮ ಅಧಿಕಾರಿಗಳು ಜಾಗ್ರತೆ ಮಾಡುತ್ತಿಲ್ಲ. ಇದರಿಂದ ನಿಮ್ಮ ಒಂದು ಆಶ್ವಾಸನೆ ನೆರವೇರುತ್ತದೋ ಅಥವಾ ಇಲ್ಲವೋ ಎಂಬತಕ್ಕಂಥ ಒಂದು ಕಲ್ಪನೆ ನಮಗೆ ಬರುತ್ತದೆ. ನಿಮ್ಮ ಒಂದು ಆಶ್ವಾಸನೆ ಜಾಗ್ರತೆ ನೆರವೇರುವಂತಾಗಲು ಸಂಬಂಧಪಟ್ಟ ಅಧಿಕಾರಿಗಳು ಒಂದು ತಿಂಗಳೊಳಗೆ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರುಮಾಡಿ ಕಳಿಸಿ ಕೊಡಬೇಕೆಂದ ಆದೇಶ ಹೊರಡಿಸುತ್ತೀರಾ ?

ಶ್ರೀ ಎನ್. ರಾಚಯ್ಯ.—ಈ ವಿಚಾರದಲ್ಲಿ ಒಂದು ಫೇಸ್ಡ್ ಪ್ರೋಗ್ರಾಮ್ ಹಾಕಿಕೊಂಡು ಎಲ್ಲ ಕಡೆ ಮಾಡೋಣ. ಮತ್ತು ತಮ್ಮ ಒಂದು ಮನೋಭಾವದಂತೆ ನಡೆಯೋಣ.

ಇನ್ನು ಈ ರಾಷ್ಟ್ರದಲ್ಲಿ ಹಾಗೂ ಈ ರಾಜ್ಯದಲ್ಲಿ ಎಷ್ಟು ಕೋಟಿ ಹರಿಜನರು ಇದ್ದಾರೆ, ಅವರೆಲ್ಲರನ್ನೂ ಡಬಲ್—ಗ್ರಾಜುಯೇಟ್‌ಗಳನ್ನಾಗಿ ಮಾಡಿದರೂ ಸಹ ಅವರ ಆರ್ಥಿಕ ಪರಿಸ್ಥಿತಿ ಏನೂ ಸುಧಾರಣೆಯಾಗುವುದಿಲ್ಲ. ಅವರ ಆರ್ಥಿಕ ಸುಧಾರಣೆಯಾಗದ ಹೊರತು ಸಾಮಾಜಿಕ ಸಮಾನತೆಯನ್ನು ಸಾಧಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಕಾರಣದಿಂದ ಈ ಜನರಿಗೆ ಹುದ್ದೆಗಳನ್ನು ಒದಗಿಸಬೇಕಾಗಿದೆ. ವಿದ್ಯೆಯಂತೆಯೇ ಉದ್ಯೋಗವೂ ಮುಖ್ಯ. ಮುದ್ದೆ ಸಿಗಬೇಕಾದರೆ ಏನಾದರೂ ಹುದ್ದೆ ಇರಬೇಕಾಗುತ್ತದೆ. ಡಾ. ಡೆಗ್ಲಾನ್ ಎಂಬುವರು The prime objective of any development is to develop the human beings ಎಂದು ಹೇಳಿದ್ದಾರೆ. ಅಂದರೆ ಕೆರೆಕಟ್ಟೆಗಳು, ಮನೆಗಳು, ರಸ್ತೆಗಳು, ಇವುಗಳ ನಿರ್ಮಾಣಕ್ಕಿಂತ ಮೊದಲು ಅತಿ ಮುಖ್ಯವಾದ ಕೆಲಸವೆಂದರೆ, ನಮ್ಮ ರಾಜ್ಯದಲ್ಲಿ ಯಾರು ನಿರ್ಗತಿಕರಾಗಿದ್ದಾರೆ, ಅವರು ಯಾವುದೇ ವರ್ಗದವರಾಗಲಿ ಮತ್ತು ಅವರು ಪಟ್ಟಣಗಳಲ್ಲಿಯೇ ವಾಸವಾಗಿರಲಿ ಅಥವಾ ಗ್ರಾಮಾಂತರ ಪ್ರದೇಶಗಳಲ್ಲಿಯೇ ವಾಸವಾಗಿರಲಿ, ಅವರುಗಳ ಒಂದು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ಅತಿ ಮುಖ್ಯವಾದ ಕೆಲಸವಾಗಿದೆ. ಇವರುಗಳಿಗೆಲ್ಲಾ ಒಂದು ಸರಿಯಾದಂಥ ಹುದ್ದೆಯನ್ನು ಒದಗಿಸುವ ಹೊರತು ಮುದ್ದೆಗೆ ಮಾರ್ಗವಿರುವುದಿಲ್ಲ. ಈ ಕಾರಣದಿಂದ ಪ್ರತಿಯೊಂದು ಶಾಖೆಯಲ್ಲಿಯೂ ಮತ್ತು ಆಡಳಿತದ ಎಲ್ಲ ಮಟ್ಟದಲ್ಲಿಯೂ ಅಂದರೆ ಕ್ಲಾಸ್-1,2,3,4, ಹುದ್ದೆಗಳಲ್ಲಿ ಇವರ ಒಂದು ಸಂಖ್ಯೆಗೆ ಅನುಗುಣವಾಗಿ ಕೆಲಸಗಳನ್ನು ಒದಗಿಸಲು ಈಗ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇಂದು ಶೇಕಡಾ 80 ರಿಂದ 90 ಭಾಗದಷ್ಟು ಜನರು ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ. ಇವರುಗಳ ಪೈಕಿ ಹರಿಜನ ಗಿರಿಜನರು ಮತ್ತು ಹಿಂದುಳಿದ ವರ್ಗದವರು ಸಹ ಇದ್ದಾರೆ. ಯಾರು ಪ್ರಬಲವಾದ ವರ್ಗದವರಿದ್ದಾರೆ, ಯಾರು ರಾಜಕೀಯವಾಗಿ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಮುಂದುವರೆದಿರುತ್ತಾರೆ ಅಂತಹವರು ಮಾತ್ರ ಪಟ್ಟಣಗಳಿಗೆ ಕೆಲಸಕ್ಕಾಗಿ ಬರುತ್ತಾರೆ. ಆದರೆ ಇನ್ನುಳಿದ ಜನರು ಹಳ್ಳಿಗಳಲ್ಲಿಯೇ ವಾಸ ಮಾಡುತ್ತಿರುತ್ತಾರೆ. ಇವರುಗಳ ಒಂದು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ಹೇಗೆ ಎಂಬುದೇ ಸರ್ಕಾರದ ಒಂದು ತೀವ್ರವಾದ ಆತಂಕವಾಗಿದೆ. ಈ ವಿಚಾರದಲ್ಲಿ ನಮ್ಮ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರು ಮತ್ತು ನಮ್ಮ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವರಾಜ ಅರಸ್ ಹಾಗೂ ಅವರ ಜೊತೆಯಲ್ಲಿ ಕೆಲಸ ಮಾಡುತ್ತಿರುವ ಮಂತ್ರಿ ಮಂಡಲದ ಸದಸ್ಯರು ಮತ್ತು ನಮ್ಮ ಪಕ್ಷದ ಶಾಸಕರು 1971ನೇ ಇಸವಿಯಲ್ಲಿ ನಡೆದ ಚುನಾವಣೆ ಸಮಯದಲ್ಲಿ ಮತ್ತು 1972ನೇ ಇಸವಿಯಲ್ಲಿ ನಡೆದ ಚುನಾವಣೆ ಸಮಯದಲ್ಲಿ ಏನೇನು ಭರವಸೆಯನ್ನು ಜನತೆಗೆ ಕೊಟ್ಟಿದ್ದರೋ ಅದರಂತೆ ನಡೆದುಕೊಳ್ಳಲು ಪ್ರಯತ್ನ ಮಾಡಿದ್ದೇವೆ. ವಿದ್ಯಾಭ್ಯಾಸದ ಸೌಲಭ್ಯ ಕೊಡುತ್ತೇವೆ. ಹರಿಜನ ಮತ್ತು ಗಿರಿಜನರಿಗೆ ರಾಜ್ಯಾಂಗದಲ್ಲಿ ಹೇಳಿರುವ ಪ್ರಕಾರ ವಿಶೇಷವಾದ ಸೌಲಭ್ಯಗಳನ್ನು ಒದಗಿಸಿಕೊಡುತ್ತೇವೆಂದು ಆ ಸಮಯದಲ್ಲಿ ಜನತೆಗೆ ಚುನಾವಣಾ ಪ್ರಣಾಳಿಕೆಯ ಮೂಲಕ ಏನು ಭರವಸೆಗಳನ್ನು ಕೊಟ್ಟಿದ್ದೇವೋ ಅದರಂತೆ ನಡೆಯುತ್ತಿದ್ದೇವೆ.

5-00 P. M.

ಇನ್ನು ಮೂರನೆಯದು ಬಹಳ ಮುಖ್ಯವಾದುದು. ಅದು ಅರ್ಥಿಕ ಪರಿಸ್ಥಿತಿ ಈ ಅರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕಾದರೆ, ಗ್ರಾಮಾಂತರಗಳಲ್ಲಿ ವಾಸ ಮಾಡುವ ಜನರು ಅವಿದ್ಯಾವಂತರಾಗಿರುವುದರಿಂದಲೂ, ನಿರುದ್ಯೋಗಿಗಳಾಗಿರುವುದರಿಂದಲೂ, ಅವರಿಗೆ ಹಣಕಾಸಿನ ಸಹಾಯವಾಗಲೀ, ಅಥವಾ ಏನಾದರೂ ಕೊಟ್ಟರೆ ಉಪಯೋಗಿಸಿಕೊಳ್ಳಲಿಕ್ಕೆ ಆಗುವುದಿಲ್ಲ ಎಂದು ತಿಳಿದು ಅವರ ಅರ್ಥಿಕ ಪರಿಸ್ಥಿತಿ ಸ್ವಾವಲಂಬನೆಗೆ ಬರುವುದಿಲ್ಲವೆಂದು ತಿಳಿದು, ಭೂಸುಧಾರಣೆ ಕಾನೂನನ್ನು ನಾವು ಈ ರಾಜ್ಯದಲ್ಲಿ 1—3—1974 ರಿಂದ ಜಾರಿಗೆ ಕೊಟ್ಟಿದ್ದೇವೆ. 1947ನೇ ಇಸವಿಯಿಂದ ಆಡಳಿತ ನಡೆಸಿದ ಯಾವ ಸರಕಾರವೂ ಕೂಡ ಇದನ್ನು ಕೊಡಲಿಲ್ಲ. ಮಾನ್ಯ ಜತ್ತಿಯವರು ಮುಖ್ಯ ಮಂತ್ರಿಗಳಾಗಿದ್ದಾಗ, ಚನ್ನಬಸಪ್ಪನವರು ಮತ್ತು ನಾನು ಇಬ್ಬರೇ (ಇಲ್ಲಿರುವವರಲ್ಲಿ) ಮಂತ್ರಿಗಳಾಗಿದ್ದೆವು, ಆಗ ನಾವು ಏನು ಒಂದು ಕಾನೂನು ಮಾಡಿದೆವು, ಅದನ್ನು ಶ್ರೀಮಾನ್ ಜತ್ತಿಯವರು ಹೋದಮೇಲೆ ಯಾರು ಬಂದರೂ ಈ ಭೂಸುಧಾರಣೆಯಲ್ಲಿ ನಂಬಿಕೆ ಇಡದೆ, ಅದನ್ನು ಪ್ರೊಹಿಬಿಷನ್ ಮಾಡಿದ ಹಾಗೆ ಮೂಲೆಗೆ ಇಟ್ಟಿದ್ದರು ನಾವು ಭೂಸುಧಾರಣೆ ಮಾಡಿ, ಅದರಿಂದ ಏನು ಮಹಾತ್ಮಾ ಗಾಂಧೀಜಿಯವರು ನಿರೀಕ್ಷಣೆ ಮಾಡಿದ್ದರು, ರಾಷ್ಟ್ರದ ಎಲ್ಲಾ ನಾಯಕರು ಏನು ನಿರೀಕ್ಷಣೆ ಮಾಡಿದ್ದರು, ಅಷ್ಟೆಲ್ಲಾ ಫಲ ಅವರಿಗೆ ದೊರೆಯುತ್ತಾ ಇಲ್ಲ. ಆದರೂ, ಅಲ್ಪಸ್ವಲ್ಪವಾದರೂ ಕೂಡ ದೊರೆಯುವಂತೆ ಮಾಡಿದ್ದೇವೆ. ಸ್ವಾತಂತ್ರ್ಯ ಹೋರಾಟ ಕಾಲದಿಂದಲೂ ಇದು ಜಾರಿಗೆ ಬರದಿದ್ದುದು, ನಮ್ಮ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸು ಅವರ ಕಾಲದಲ್ಲಿ ಜಾರಿಗೆ ಬಂದಿದೆ. ಮಾನ್ಯ ಕಂದಾಯ ಮಂತ್ರಿಗಳು ಅಂಕಿ-ಅಂಶಗಳನ್ನು ಕೊಡುತ್ತಾರೆ, ಕನಿಷ್ಠ ಪಕ್ಷ 4 ಲಕ್ಷ ಎಕರೆ ಸರ್‌ಪ್ಲಸ್ ಲ್ಯಾಂಡ್ ಬರುತ್ತದೆ. ಎಂದು ನಿರೀಕ್ಷೆ ಮಾಡಿದ್ದಾರೆ ಟೆನೆಂಟೆಡ್ ಲ್ಯಾಂಡ್ ಏನು ಇದೆ ಅದು ಕನಿಷ್ಠ ಪಕ್ಷ ಏನಾದರೂ 10 ಲಕ್ಷ ಎಕರೆ ಮೇಲೆ ಬರುತ್ತದೆ, ಎಂದು ಕಂದಾಯ ಮಂತ್ರಿಗಳು ಹೇಳುತ್ತಾ ಇದ್ದಾರೆ. ಗುತ್ತಿಗೆದಾರರ ಸ್ವಾಧೀನ ಏನು ಇದೆ, ಆದು 15 ಲಕ್ಷಕ್ಕೂ ಹೆಚ್ಚಿಗೆ ಹೋಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಇದರಲ್ಲಿ ಅರ್ಧ ಭಾಗ ಜಮೀನಾದರೂ ಹಿಂದುಳಿದ ವರ್ಗದ ಜನರಿಗೆ, ಹರಿಜನ ಗಿರಿಜನರಿಗೆ ಕೊಡುವುದರಿಂದ, ಲಕ್ಷೋಪಲಕ್ಷ ಜನ ಯಾರು ಅವಿದ್ಯಾವಂತರಾಗಿದ್ದಾರೆ, ಯಾರು ಬಡವರಾಗಿದ್ದಾರೆ, ಯಾರು ಕೃಷಿ ಕಾರ್ಮಿಕರಾಗಿದ್ದಾರೆ, ಯಾರು ನಿರುದ್ಯೋಗಿಗಳಾಗಿದ್ದಾರೆ, ಅವರಿಗೆಲ್ಲಾ ಇದರಿಂದ ಹೆಚ್ಚಿನ ಲಾಭವಾಗುತ್ತದೆ ಎಂದು ಹೇಳಬಯಸುತ್ತೇನೆ. ಇದರಿಂದಾಗಿ, ತಮ್ಮ ಸ್ವಂತ ಜಮೀನುಗಳೆಂದು 1—2 ಎಕರೆಯನ್ನು ಪಡೆದು, ಅವರ ಕಾಲಮೇಲೆ ಅವರು ನಿಂತು, ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳತಕ್ಕ ಈ ಭೂಸುಧಾರಣಾ ಕಾನೂನು ಬದ್ಧವಾಗಿ, ರಾಜ್ಯಾಂಗ ಬದ್ಧವಾಗಿ ಈ ನಮ್ಮ ಸರಕಾರದಲ್ಲಿ ಮಾಡಿದ್ದೇವೆ. ಇದನ್ನು ಪ್ರಭಾಕರ್‌ರವರಾಗಲೀ, ದೇವೇಗೌಡರಾಗಲೀ ಪ್ರಸ್ತಾಪ ಮಾಡಿದ್ದರೆ ಬಹಳ ಚೆನ್ನಾಗಿತ್ತು. ಎಲ್ಲಾ ಸದಸ್ಯರಲ್ಲೂ ನಾನು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ, ಅರ್ಥಿಕ ಪರಿಸ್ಥಿತಿ ಸುಧಾರಣೆ ಆಗಬೇಕಾದರೆ, ಕಾರ್ಮಿಕರು ಏನಿದ್ದಾರೆ, ಹರಿಜನ ಗಿರಿಜನ ಏನಿದ್ದಾರೆ ಅವರಿಗೆ ಇದರ ಪೂರ್ಣ ಪ್ರಯೋಜನ ಸಿಗುವಂತೆ ಮಾಡಬೇಕು. ಹರಿಜನ ಗಿರಿಜನರಿಗೆ ನೀವು ಏನು ಮಾಡಿದ್ದೀರಿ, ನಿಮ್ಮ ಭರವಸೆಗಳೆಲ್ಲಾ ಏನಾದವು ಎಂದು ವಿರೋಧಪಕ್ಷದವರು ಮತ್ತು ಇತರ ಕೆಲವು ಜನರು ಸರಕಾರಕ್ಕೆ ಪ್ರಶ್ನೆ ಹಾಕುತ್ತಾರೆ. ಆದುದರಿಂದ, ಇವುಗಳನ್ನು ಇವತ್ತಿನ ದಿವಸ ಪ್ರಚಾರ ಮಾಡಬೇಕೆಂದು ವಿನಯದಿಂದ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ ಈ ಭೂಸುಧಾರಣಾ ಕಾನೂನಿನಿಂದ ಬಡವರಿಗೆ, ಗ್ರಾಮಾಂತರಗಳಲ್ಲಿ ವಾಸ ಮಾಡುವವರಿಗೆ ಹೆಚ್ಚು ಸಹಾಯವಾಗುತ್ತದೆ. ಹಿಂದೆ ಹರಿಜನ ಗಿರಿಜನರಿಗೆ 200-300 ಗ್ರಾಂಟ್ ಎಂದು ಕೊಡುತ್ತಿದ್ದರು ನಾನು 1958—62ನೇ ಸಾಲಿನಲ್ಲಿ ಸಚಿವನಾಗಿದ್ದಾಗ, ನಾನು ಯೋಚನೆ ಮಾಡಿದೆ, ಈ ಹರಿಜನರು ಈ ದೇಶದಲ್ಲಿ ಭಿಕ್ಷುಕರೇನಲ್ಲ, ಇವರೂ ಶ್ರಮಜೀವಿಗಳು ಮತ್ತು ಮತದಾರರು ಅಲ್ಲದೆ ಬಹಳ ನಿಷ್ಠಾವಂತರು ಮತ್ತು ಗಂಡಸರು, ಹೆಂಗಸರು ಎನ್ನದೆ ಮಕ್ಕಳಾದಿಯಾಗಿ ಬಹಳ ಕಷ್ಟಪಟ್ಟು ದುಡಿಯತಕ್ಕವರು. ಇವರಿಗೆ ಸಾಲದ ರೂಪದಲ್ಲಿ ಕೊಡಬೇಕು ಇಲ್ಲದಿದ್ದರೆ ಮದ್ಯಸ್ನಗಾರ ಅಥವಾ ಇನ್ನಾವನೋ ತಿಂದುಹಾಕಿಬಿಡುತ್ತಾನೆ, ಇದರಿಂದ ಧನಸಹಾಯ ಅವರಿಗೆ ಅಷ್ಟಾಗಿ ಸಿಕ್ಕುವುದಿಲ್ಲ ಎಂದು ಹೇಳಿ 1,500 ರೂಪಾಯಿಗಳಿಂದ 3,000 ರೂಪಾಯಿಗಳ ತನಕ ಮನೆ ಕಟ್ಟಿಕೊಳ್ಳುವುದಕ್ಕೆ ಇಡೀ ರಾಜ್ಯದ ಪ್ರತಿಯೊಂದು ಹೆಡ್‌ಕ್ವಾರ್ಟರ್ಸ್‌ಗಳಲ್ಲೂ, ನಗರಗಳಲ್ಲಿ ಸಹಕಾರ ಸಂಘಗಳನ್ನು ಮಾಡಿ, ಇದಕ್ಕಾಗಿ ನಾಲ್ಕೂವರೆ ಕೋಟಿ ಹಣವನ್ನು ಕೊಟ್ಟಿದ್ದೇವೆ. ಈಗ 1972ನೇ ಇಸವಿಯಲ್ಲಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಒಂದು ತೀರ್ಮಾನಕ್ಕೆ ಬಂದು 1971–72ರಲ್ಲಿ ಕೊಟ್ಟಂಥ ಭರವಸೆ ಪ್ರಕಾರ ಪ್ರತಿಯೊಬ್ಬನಿಗೂ, ಗ್ರಾಮಾಂತರಗಳಲ್ಲಿರುವವರಾಗಲೀ, ಅಥವಾ ಯಾವ ವರ್ಗದ ಜನರೇ ಆಗಲೀ, ಯಾರು ನಿವೇಶನ ಇಲ್ಲದೆ, ಮನೆ ಇಲ್ಲದೆ,

ಜಮೀನು ಇಲ್ಲದೆ ಇರುತ್ತಾನೆ ಅಂತಹವರಿಗೆ ಸ್ವಂತ ನಿವೇಶನ ಇರಬೇಕು. ಅದರಲ್ಲಿ ಸ್ವಂತ ಷೆಡ್ಡನ್ನು ಹಾಕಿಕೊಂಡು ಮಿಲಿಟರಿ ಸಿಪಾಯಿ ತರಹ ಇರುವಂತೆ ಮಾಡಿದ್ದೇವೆ. ಸ್ವಾತಂತ್ರ್ಯ ಬಂದು 27 ವರ್ಷಗಳಾದಮೇಲೆ, ಸ್ವಾತಂತ್ರ ಭಾರತದಲ್ಲಿರುವಾಗ ಅವರು ಹುಮ್ಮಸ್ಸಿನಿಂದ, ಧೈರ್ಯ ಮತ್ತು ವಿಶ್ವಾಸ ಬರುವ ರೀತಿಯಲ್ಲಿ ವಾಸ ಮಾಡಿಕೊಂಡಿರತಕ್ಕ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ಅವರ ಬಗ್ಗೆ ಗೌರವ ಮನೋಭಾವ ಬರುವ ರೀತಿಯಲ್ಲಿ ಇವತ್ತಿನ ದಿವಸ ಮೂರು ಲಕ್ಷವಲ್ಲ, ಮೂರೂವರೆ ಲಕ್ಷ ನಿವೇಶನಗಳನ್ನು ಗ್ರಾಮಾಂತರಗಳಲ್ಲಿ ಯಾರಿಗೆ ನಿವೇಶನ ಇಲ್ಲವೋ ಅವರಿಗೆ ಹಂಚಿದ್ದೇವೆ. ಕೆಲವರು ಸರಕಾರದ ಗಮನಕ್ಕೆ ತರುತ್ತಿದ್ದಾರೆ, ವಿರೋಧ ಪಕ್ಷದವರು ಬಹಳವಾಗಿ ಹೇಳುತ್ತಿದ್ದಾರೆ. ನಿವೇಶನ ಸರಿಯಾದ ಜಾಗದಲ್ಲಿಲ್ಲ, ಹಳ್ಳ ಇದೆ, ಕೊಳ್ಳ ಇದೆ. ಎಂದು ಅದನ್ನು ಸರಕಾರ ಒಪ್ಪಿಕೊಂಡು, ಅವೆಲ್ಲವನ್ನೂ ಸರಿಪಡಿಸಿಕೊಡುತ್ತೇವೆ. ಇವತ್ತಿನ ದಿವಸ ಹೊಸ ಹೊಸ ಕಾಲೋನಿಗಳು ಹುಟ್ಟುತ್ತಿರುವುದನ್ನು ನೋಡಿದರೆ, ಈ ಜನತಾ ಗೃಹನಿರ್ಮಾಣ ಯೋಜನೆ ಎಂದು ಏನು ಇದೆ, ಅದರ ಪ್ರಕಾರ ಕಗ್ಗೋಡು ಎನ್ನತಕ್ಕ ಗ್ರಾಮದಲ್ಲಿ ಮುಖ್ಯಮಂತ್ರಿಗಳು ಪ್ರಾರಂಭೋತ್ಸವ ಮಾಡಿ ಬಂದಿದ್ದಾರೆ. ಲಿಂಗಾಯಿತರು, ಮುಸಲ್ಮಾನರು, ಬೋವಿಗಳು ಹರಿಜನರು, ನಾಯಕರೂ ಇವರೆಲ್ಲರೂ ಯಾವುದೇ ವರ್ಗಭೇದವಿಲ್ಲದೆ ಒಂದೇ ಬಾವಿಯಲ್ಲಿ ನೀರು ಸೇದುವುದನ್ನು ಮೊನ್ನೆ 27ನೇ ತಾರೀಖು ನಾನು ಹೋಗಿ ನೋಡಿ, ಮಕ್ಕಳಿಗೆ ಬಟ್ಟೆ ಎಲ್ಲವನ್ನೂ ಹಂಚಿ ಬಂದಿದ್ದೇನೆ. ಜನವಣ್ಣ, ಮಹಾತ್ಮ ಗಾಂಧೀಜಿ ಅವರ ಜೀವನ ವಾತಾವರಣ ಈ ದೇಶದಲ್ಲಿ ಇತ್ತೀಚೆಗೆ ಬರುತ್ತಾ ಇದೆ. ಈ ಯೋಜನೆಯ ಫಲ ಏನು ಎಂದರೆ, ಯಾರು ಬಡವರಾಗಿರುತ್ತಾರೆ, ಇಲ್ಲಿ ಜಾತಿ ವಿಷಯ ಬರುವುದಿಲ್ಲ ; ಅವರೆಲ್ಲಾ ಒಂದು ಕಡೆ ವಾಸ ಮಾಡತಕ್ಕ ಮಾನಸಿಕ, ಸಾಮಾಜಿಕ, ಬಹಳ ಕ್ರಾಂತಿಕಾರಕವಾದ ಬದಲಾವಣೆಯನ್ನು ಮಾಡಿದೆ ಎಂದು ನಾನು ಬಹಳ ಸಂತೋಷದಿಂದ ಹೇಳಬಯಸುತ್ತೇನೆ. 34 ಸಾವಿರ ಮನೆಗಳನ್ನು ಹಣಕಾಸಿನ ಸಚಿವರು ಈಗಾಗಲೇ ಘೋಷಣೆ ಮಾಡಿದ್ದಾರೆ. ಅವರು ಮಾಡಿರುವ ಘೋಷಣೆ ಪ್ರಕಾರ ಮಾರ್ಚ್ 31ನೇ ತಾರೀಖಿನೊಳಗೆ ಕೊಡುತ್ತೇವೆ. ಹಾಗೇನಾದರೂ ಅವುಗಳನ್ನು ಪೂರೈಸದೇ ಹೋದರೆ ಮುಂದಿನ ವರ್ಷದ ಆದಿ ಭಾಗದಲ್ಲಿ ಸಂಪೂರ್ಣ ಮಾಡುತ್ತೇವೆಂದು ಮಾನ್ಯ ಹಣಕಾಸಿನ ಸಚಿವರು ಹೇಳಿದ್ದಾರೆ. ಇದನ್ನು ನಾನೂ ಕೂಡ ಸ್ಪಷ್ಟೀಕರಣ ಮಾಡುತ್ತೇನೆ. ಸಮರ್ಥನೆ ಮಾಡುತ್ತೇನೆ. ಗುಲ್ಬರ್ಗ, ಬಿಜಾಪುರ, ಬಿದರೆ ಮತ್ತು ಬೆಳಗಾಂ ಮುಂತಾದ ಕಡೆಗಳಲ್ಲಿ ನಾವು ಹೋದರೆ, ಅಲ್ಲಿನವರಲ್ಲಿ ಒಂದು ರೀತಿಯ ಉತ್ಸಾಹ, ಧೈರ್ಯ, ವಿಶ್ವಾಸ ಈ ಸರಕಾರದಲ್ಲಿ ಮೂಡಿದೆ. ಅದನ್ನು ನಾವು ಹೇಳುವುದಕ್ಕಾಗುವುದಿಲ್ಲ. ಅದರ ಬಗ್ಗೆ ವಿವರಣೆ ಮಾಡುವುದಕ್ಕೆ ನನಗೆ ಇಷ್ಟವಿಲ್ಲ. ಅಷ್ಟೊಂದು ಒಳ್ಳೆಯ ಪರಿಣಾಮ ಇವತ್ತಿನ ದಿವಸ ನಮ್ಮ ರಾಜ್ಯದ ಜನತೆಯ ಮನಸ್ಸಿನಲ್ಲಿ ಆಗಿದೆ ಎಂದು ನಾನು ಹೆಮ್ಮೆಯಿಂದ ಹೇಳುತ್ತೇನೆ. 1970-71ನೇ ಸಾಲಿನಲ್ಲಿ ನಾವು ಏನು ಒಂದು ನೀರಿನ ಯೋಜನೆಯನ್ನು ಪ್ರಾರಂಭ ಮಾಡಿ ಅದರ ಪ್ರಕಾರ ಕನಿಷ್ಠಪಕ್ಷ 3,314 ಹಳ್ಳಿಗಳಲ್ಲ ಮಾತ್ರವಲ್ಲ, 26, 825 ಗ್ರಾಮಗಳಲ್ಲಿ ನಾವು ಈಗಾಗಲೇ 28 ಸಾವಿರ ಚಿಲ್ಲರೆ ಬಾವಿಗಳನ್ನು ತೋಡಿಸಿದ್ದೇವೆ. ಕೆಲವು ಕಡೆಗಳಲ್ಲಿ ಹೆಚ್ಚಿಗೆ ಬಾವಿಗಳನ್ನೂ ತೋಡಿದ್ದೇವೆ. ಇನ್ನೂ ಕೆಲವು ಕಡೆ ನೀರಿನ ಸೋರ್ಸ್ ಇರುವುದಿಲ್ಲ. ಅಂಥವು ಸುಮಾರು 200-300 ಗ್ರಾಮಗಳಿಗೆ ಕೆಲವು ಕಡೆಗಳಲ್ಲಿ ಬಹಳ ದೂರದಿಂದ ನೀರನ್ನು ಪಡೆಯಬೇಕಾಗಿದೆ ; ಅದಕ್ಕೋಸ್ಕರವಾಗಿ ಬೋರ್ ವೆಲ್ಸ್‌ಗಳನ್ನು ಹಾಕಿಸಿ, ರಿಗ್ಸ್ ಮೂಲಕ ನೀರನ್ನು ಒದಗಿಸಬೇಕು ಎಂದು ಸರಕಾರದ ಮನಸ್ಸಿನಲ್ಲಿ ಇದೆ. ದಕ್ಷಿಣ ಕನ್ನಡ ಮತ್ತು ಕೊಡಗು ಮುಂತಾದ ಕಡೆಗಳಲ್ಲಿ ರಿಗ್ ಮಿಷನ್ಸ್ ಮೂಲಕ ಬಾವಿ ತಗೆದರೂ ಎಷ್ಟು ಆಳ ಮಾಡಿದರೂ ನೀರು ಬರುವುದಿಲ್ಲ. ಇಂಜಿನಿಯರ್‌ರವರೂ ಸಹ ಹೋಗಿ ನೋಡಿದ್ದಾರೆ. ಒಟ್ಟಿನಲ್ಲಿ 5ನೇ ಪಂಚವಾರ್ಷಿಕ ಯೋಜನೆ ಅವಧಿಯೊಳಗೆ, ಸಾಧ್ಯವಾದರೆ 31ನೇ ಡಿಸೆಂಬರ್ 1975ರೊಳಗೆ ಎಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲ ಅಂತಹ ಕಡೆಗಳಲ್ಲೆಲ್ಲಾ ಬಾವಿಗಳನ್ನು ಕೊಡಬೇಕು ಎಂದು ಮನಸ್ಸು ಮಾಡಿದ್ದೇನೆ. ಹೆಚ್ಚಿನ ಲೋಕಾಲಿಟಿ ಅಂದರೆ ಐವತ್ತು ಮನೆಗಳು ಇದ್ದರೆ ಬಾವಿಗಳನ್ನು ಕೊಡಬೇಕು ಎಂದು ಇತ್ತು, ನೂರಕ್ಕೆ ಹತ್ತು ಭಾಗ ಅವರು ಕೊಡಬೇಕು ಎಂದು ಇತ್ತು. ನಾನು ಬಂದತಕ್ಷಣ ಐದು ಮನೆ ಇರಲಿ, ಒಂದು ಮನೆ ಇರಲಿ, ಜಿಲ್ಲಾಧಿಕಾರಿಗಳು, ಯಾರು ಬಾವಿಯನ್ನು ಮುಂಜೂರು ಮಾಡುತ್ತಾರೋ, ಅವರು ಮನಸ್ಸು ಬಂದ ಕಡೆ ಕೊಡಬೇಕು ಎನ್ನುವ ಷರತ್ತು ಇತ್ತೋ ಅವೆಲ್ಲವನ್ನೂ ತೆಗೆದುಹಾಕಿ ಟಾಪ್ ಪ್ರಿಯಾರಿಟಿ ಮೇಲೆ ಬಾವಿಗಳನ್ನು ಕೊಡಬೇಕು ಎಂದು ಆಜ್ಞೆ ಮಾಡಿದ್ದೇನೆ. ಹಿಂದೆ ಯಾವ ಸರ್ಕಾರ ಮಾಡಿರಲಿಲ್ಲ, ಯಾವ ಸರ್ಕಾರ ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ, ಈ ಸರ್ಕಾರ ಮಾಡಿದೆ ಎಂದು ಮನವಿ ಮಾಡಿಕೊಳ್ಳುತ್ತೇನೆ. ಕುಡಿಯುವ ನೀರಿನ ಅಗತ್ಯತೆ ಎಲ್ಲದಕ್ಕಿಂತ ಮುಖ್ಯವಾದುದು. ಹರಿಜನರೇ ಅಲ್ಲ, ಬಡವರೇ ಅಲ್ಲ, ಗ್ರಾಮಾಂತರ ಪ್ರದೇಶದ ಯಾರೇ ಆಗಿರಲಿ, ಅವರಿಗೆ ನೀರಿನ ಸೌಲಭ್ಯ ಸ್ವಚ್ಛ ನೀರಿನ ಸೌಲಭ್ಯ ಒದಗಿಸುವುದು ಸರ್ಕಾರದ ಕರ್ತವ್ಯ. ಈ ದಿಸೆಯಲ್ಲಿ ನಮ್ಮ ಹಣಕಾಸಿನ ಸಚಿವರು

ಹೇಳಿರುವ ರೀತಿಯಲ್ಲಿ 1970-71ರಲ್ಲಿ ಶುರು ಮಾಡಿದಾಗ 60-70 ಲಕ್ಷ ರೂಪಾಯಿ ಖರ್ಚಾಗಿದ್ದವು. ಈ ವರ್ಷ ಎರಡು ಕೋಟಿ ರೂಪಾಯಿ ಯೋಜನೆ ಮಾಡಿರುವ ಪ್ರಕಾರ, ಈ ಒಂದು ವರ್ಷದಲ್ಲೇ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ದಿನ ಪ್ರಸ್ತಾಪ ಬಂದತಕ್ಷಣ ಎಷ್ಟೆಷ್ಟು ಹಣ ಯಾವ ಯಾವ ಡಿವಿಷನ್ನಿಗೆ ಕೊಟ್ಟಿದ್ದಾರೆ. ಎಂದರೆ ಕೆಲವು ಜಿಲ್ಲೆಗಳಲ್ಲಿ ಅದನ್ನು ಸರೆಂಡರ್ ಮಾಡುತ್ತಾರೆ ಎಂದು ಗೊತ್ತಾಯಿತು. ಅದನ್ನು ತೆಗೆದು ಬೇರೆ ಜಿಲ್ಲೆಗಳಿಗೆ ಕಳುಹಿಸಿ ಎಲ್ಲಿ ನೀರಿನ ಸೌಕರ್ಯವಿಲ್ಲ ಅಂತಹ ಕಡೆ ನೀರಿನ ಸೌಕರ್ಯಕ್ಕೆ ಉಪಯೋಗಿಸಿ ಇವೊತ್ತು ಪ್ರಾಮಾಣಿಕವಾದಂಥ ಕಾರ್ಯ ಮಾಡುತ್ತಿದ್ದೇವೆ. ಅಷ್ಟೇ ಅಲ್ಲ ಅರಸೀಕೆರೆ ಮುಂತಾದ ಕಡೆ ಹೋದಾಗ ನಿರ್ಗತಿಕ ಜನ ವಾಸಮಾಡುವ ಕಡೆ ಬಾವಿಗಳು ಇದ್ದರೆ ಅವುಗಳ ದುರಸ್ತಿ ಸರಿ ಇರುವುದಿಲ್ಲ, ಕೆಲವು ಮುರಿದು ಬಿದ್ದಿರುತ್ತವೆ, ಅಲ್ಲಿ ಬಾವಿಗಳಿಗೆ ರಿಪೇರಿ ಇಲ್ಲ, ಇದು ನನ್ನ ಗಮನಕ್ಕೆ ಬಂದಿದೆ; ಈಗ ಸುಮಾರು ಮೂರು ತಿಂಗಳಲ್ಲಿ ಹದಿನೈದು ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇನೆ. ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ಪ್ರವಾಸ ಹೋಗಿಲ್ಲ: ನಾನು ಗ್ರಾಮಾಂತರ ಪ್ರದೇಶಗಳಲ್ಲಿ ಬಹು ಭಾಗ ಪ್ರವಾಸ ಮಾಡಿದ್ದೇನೆ, ಆವಾಗ ನನ್ನ ಗಮನಕ್ಕೆ ಬಂದಿದೆ, ನಮ್ಮಲ್ಲಿ ರಿಪೇರಿಗೆ ದುಡ್ಡಿಲ್ಲ, ತಾಲ್ಲೂಕು ಬೋರ್ಡಿನವರು ಮಾಡುವುದಿಲ್ಲ, ಬೇರೆ ಯಾವರು ಮಾಡಿಸುವುದಿಲ್ಲ ಎಂದು, ಕೂಡಲೇ ಅದಕ್ಕೆ ಒಂದು ಆರ್ಡರ್ ಹೊರಡಿಸಿ ಅಲ್ಲಿ ನಾವು ನೀರಿನ ಸೌಕರ್ಯ ಒದಗಿಸುತ್ತಿದ್ದೇವೆ. ಈ ಒಂದು ಹಂತದಲ್ಲಿ ಯಾವ ಕಡೆ ಬಾವಿಗಳು ಕೆಟ್ಟಿವೆ ಅಂತಹ ಕಡೆಗಳಲ್ಲಿ ರಿಪೇರಿ ಮಾಡಬೇಕು ಎಂದು ಒಂದು ಆರ್ಡರ್ ಹೊರಡಿಸಿದ್ದೇನೆ. ಅಷ್ಟೇ ಅಲ್ಲ, ಶ್ರೀಮಾನ್ ಪ್ರಭಾಕರ್ ಅವರು ಇದ್ದರೆ ಚೆನ್ನಾಗಿತ್ತು, ಈ ಅಸ್ಪೃಶ್ಯತೆಯನ್ನು ತೆಗೆಯಬೇಕು ಎಂದು ಹೇಳಿದ್ದರು, ಎಲ್ಲಿ ಟೌನ್ ಪಂಚಾಯಿತಿಗಳು ಇವೆಯೋ ಅಲ್ಲಿ ಇಪ್ಪತ್ತು ಭಾಗ ನಿವೇಶನಗಳನ್ನು ಹರಿಜನರಿಗೆ ಮುಫತ್ತಾಗಿ ಕೊಡಬೇಕು ಎಂದು ಆರ್ಡರ್ ಮಾಡಿದ. ಒಂದು ಸೈಟಿಗೆ ಕನಿಷ್ಠ ಪಕ್ಷ ಎರಡು ಸಾವಿರ ಬೆಲೆ ಬೀಳಬಹುದು. ಕನ್‌ಸಿಡರೇಷನ್ ಎಂದು ಸರ್ಕಾರದವರು ನಿಗದಿಮಾಡಿದರು ಕೂಡ ಪಂಚಾಯಿತಿಯಲ್ಲಿ ಇರತಕ್ಕ ಜನ ಸೇರಿಕೊಂಡು ಸಣ್ಣಪುಟ್ಟ ಅಧಿಕಾರಿಗಳು ಒಂದು ಎನ್ನುವುದನ್ನು ನೂರು ಮಾಡುವುದಕ್ಕೆ ಸಾಧ್ಯವಿದೆ. ನೂರು ರೂಪಾಯಿ ಕೊಟ್ಟು ತೆಗೆದುಕೊಳ್ಳುವುದಕ್ಕೆ ಶಕ್ತಿ ಇಲ್ಲ, ಅವರು ಮಧ್ಯದಲ್ಲಿ ವಾಸಮಾಡುವುದಕ್ಕೆ ಆಗುವುದಿಲ್ಲ ಎಂದು ಆರು ತಿಂಗಳ ಹಿಂದೆ ಒಂದು ಆರ್ಡರ್ ಮಾಡಿ ಮುಫತ್ತಾಗಿ 20 ಭಾಗ ನಿವೇಶನಗಳನ್ನು ಹರಿಜನರಿಗೆ ಕೊಡಬೇಕು ಎಂದು ಆರ್ಡರ್ ಮಾಡಿದ್ದೇನೆ. ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ನಲ್ಲಿ ನಲವತ್ತೈದು ಸಾವಿರ ರೂಪಾಯಿ ಅಂದಾಜು ಇದ್ದರೆ ಕಮ್ಯೂನಿಟಿ ಇರಿಗೇಷನ್ ವೆಲ್ಸ್ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ ಜನಗಳಿಗೆ ಪ್ರತಿಯೊಂದು ತಾಲ್ಲೋಕಿನಲ್ಲೂ ಒದಗಿಸಿದೆ. ಮೊನ್ನೆ ಕೊರಟಗೆರೆ ಮುಂತಾದ ಜಾಗಗಳಲ್ಲಿ ಉದ್ಘಾಟನೆ ಮಾಡಿ ಬಂದಿದ್ದೇನೆ ಅದನ್ನು ಜಾಗೆಗೆ ಕೊಟ್ಟಿದ್ದೇನೆ. ಅವೇ ಅಲ್ಲದೆ ಹರಿಜನರು ನಮ್ಮ ದೇಶದಲ್ಲಿ ಇರತಕ್ಕದ್ದು ಸಾವಿರಾರು ವರ್ಷದಿಂದ, ಇವರು ಹಸಿವು, ಅಜ್ಞಾನ ನಿರುದ್ಯೋಗದಲ್ಲಿ, ಬಡತನದಲ್ಲಿ ಇವರು ಬಹಳ ಹೆದರಿಕೆಯಿಂದ ಬೆಳೆದು ಬಂದಿದ್ದಾರೆ. ಇವರಿಗೆ ಕೇಂದ್ರಸರ್ಕಾರದವರು, ರಾಜ್ಯಸರ್ಕಾರಕ್ಕೆ ಏನು ಸೌಲಭ್ಯ ಕೊಟ್ಟರು ತೆಗೆದುಕೊಳ್ಳುವ ಮನೋಭಾವ, ಧೈರ್ಯ, ಹೆಚ್ಚಿಗೆ ಕೇಳತಕ್ಕ ಮನೋಭಾವ ಇಲ್ಲ. ಇವರು ಹೋಟಲಿನಲ್ಲಿ ಅಥವಾ ಸಾರ್ವಜನಿಕ ರಸ್ತೆಯಲ್ಲಿ ಹೋಗಬೇಕಾದರೆ, ದೇವಸ್ಥಾನಕ್ಕೆ ಹೋಗಬೇಕಾದರೆ, ಎಲ್ಲೋ ಹೋಗಬೇಕಾದರೂ ಅಸ್ಪೃಶ್ಯತಾ ನಿವಾರಣ ಕಾನೂನು ಪ್ರಕಾರ ಅವಕಾಶ ಇದ್ದರೂ ಕೂಡ ಅವರು ಅವನ್ನು ಉಪಯೋಗಿಸಿಕೊಳ್ಳತಕ್ಕ ಶಕ್ತಿ ಅವರಿಗೆ ಇರಲಿಲ್ಲ ಎಂದು ನಾನು ಸ್ಪಷ್ಟಪಡಿಸುತ್ತೇನೆ. ಭಾರತ ದೇಶದಲ್ಲಿ ನಮ್ಮ ಸಂವಿಧಾನ ಬಹಳ ಪವಿತ್ರವಾದ ಸಂವಿಧಾನ. ಸಂವಿಧಾನ ಏನು ಮಾಡಿದೆ ಎರಡು ಭಾಗ ಮಾಡಿದೆ ಒಂದು ಸ್ಟ್ರಾಂಗರ್ ಸೆಕ್ಷನ್, ಮತ್ತು ಒಂದು ವೀಕರ್ ಸೆಕ್ಷನ್ ಎಂದು ಮಾಡಿದೆ Our Society is divided into two sections stronger sections and weaker sections. The weaker sections are those who are socially, politically and educationally backward and who are down below when compared to others. 15,46,45 ರ ಆರ್ಟಿಕಲ್ ಮತ್ತು ಇನ್ನು ಅನೇಕ ಕಲಂಗಳನುಸಾರ ರಾಜ್ಯಾಂಗ ವೀಕರ್ ಸೆಕ್ಷನ್ ಯಾರು, ಯಾರು ಬ್ಯಾಕ್‌ವರ್ಡ್ ಕಮ್ಯೂನಿಟಿ ಎಂದರೆ ಷೆಡ್ಯೂಲ್ಡ್ ಕಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್, ವೀಕರ್ ಸೆಕ್ಷನ್ಸ್, ಇದರಲ್ಲಿ ಎ.ಬಿ.ಸಿ. ಎಂದು ಮಾಡಿದೆ. (ಎ.) The people who are human beings, who could not aford to live with the general population in any city or village enjoying culture and other human facilities and who are living in secluded places like hilly areas. ಇವರು ಟ್ರೈಬಲ್ ಪೀಪಲ್ ಇವರಿಗೆ ರಾಜ್ಯಾಂಗದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ರಕ್ಷಣೆ

ಕೊಟ್ಟಿದೆ. ಇದನ್ನು ಸರ್ಕಾರದವರು ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲೆಲ್ಲಾ ಎರಡೂವರೆ ಲಕ್ಷ ಜನ ಇರಬಹುದು, ಅವರಿಗೆ ಒಂದು ವಿಶೇಷ ಸೌಲಭ್ಯ ಕೊಡುತ್ತಿದ್ದೇವೆ. ನೂರಕ್ಕೆ 15 ಭಾಗ ಷೆಡ್ಯೂಲ್ಡ್ ಟ್ರೈಬ್ಸ್. ಇನ್ನೂ ಜನಗಣತಿ ಪ್ರಕಾರ ಕನಿಷ್ಟ ಐವತ್ತು ಲಕ್ಷ ಜನ ಇದ್ದಾರೆ. ಮೂರು ಕೋಟಿ ಜನರಲ್ಲಿ ಇವರನ್ನು ಅಸ್ಪೃಶ್ಯರು ಎಂದು ಮಾಡಿರುತ್ತಾರೆ. The critreia of determinig the Scheduled Caste is tbased on stigma of untouchability. ಯಾರು ಅಸ್ಪೃಶ್ಯತೆಯ ಒಂದು ಸಾಮಾಜಿಕ ಅನಿಶ್ಚಿತತೆಯಿಂದಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ ಎಲ್ಲಾ ಪ್ರದೇಶಗಳಲ್ಲೂ ಸಾವಿರಾರು ವರ್ಷದಿಂದ ಅವರು ಹಿಂದೆ ಬಿದ್ದಿದ್ದಾರೆ. ಅವರು ಮನುಷ್ಯರಾಗಿ ಬಾಳುವುದಕ್ಕೆ ಸಂವಿಧಾನ ರಚನೆಮಾಡಿದ ಮಹಾನಾಯಕರು ನಮ್ಮ ಎದುರಿನಲ್ಲೇ ಇದ್ದಾರೆ. ಡಾ. ಅಂಬೇಡ್ಕರ್ ಜಗಜೀವನ್‌ರಾಮ್ ಅವರು ಎಲ್ಲಾ ಸೇರಿ ಒಂದು ವಿಶೇಷ ರಕ್ಷಣೆ ಕೊಟ್ಟಿದ್ದಾರೆ. ರಾಷ್ಟ್ರದ ಎಲಾ ವರ್ಗದ ಅರವತ್ತು ಕೋಟಿ ಜನಗಳಿಗೂ ಸಮಾನವಾದಂಥ ಅವಕಾಶ, ಒಂದು ತರಹ ನ್ಯಾಯ, ಒಂದು ತರಹ ರಕ್ಷಣೆ ಕೊಟ್ಟಿದ್ದಾರೆ. ನೂರಕ್ಕೆ ಅರವತ್ತು ಎಪ್ಪತ್ತು ಭಾಗ ಗಿರಿಜನರು, ಮತ್ತು ಹರಿಜನರಿಗೆ ವಿಧಾನಸಭೆ, ಲೋಕಸಭೆ, ಸ್ಥಳೀಯಸಂಸ್ಥೆಗಳಲ್ಲಿ, ಪಟ್ಟಣಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲದರಲ್ಲೂ ಕೂಡ ರಾಜಕೀಯ ರಕ್ಷಣೆಯನ್ನು ಕೊಟ್ಟಿದ್ದಾರೆ, ನಮ್ಮ ರಾಜ್ಯದಲ್ಲಿ ಕನಿಷ್ಟಪಕ್ಷ ನಲವತ್ತರಿಂದ ಐವತ್ತು ಭಾಗ ಇರಬಹುದು, ಇದು ಹಾವನೂರು ಆಯೋಗದಿಂದ ಸರ್ಕಾರಕ್ಕೆ ಅಂಕಿಅಂಶ ಬಂದರೆ ಗೊತ್ತಾಗುತ್ತದೆ. The people who are socially and educationally backward shall be listed as backward classes. ಆದರೆ ಜತ್ತಿ ಸರ್ಕಾರ ಹೋದ ಮೇಲೆ ಶ್ರೀಮಾನ್ ದೇವರಾಜ್ ಅರಸ್‌ರವರು ಸರ್ಕಾರ ಬರುವ ತನಕ ಯಾವ ಸರ್ಕಾರಗಳು ಇತ್ತೋ ಅವು ಸೋಷಿಯಲಿ ಅಂಡ್ ಎಕನಾಮಿಕಲಿ ಬ್ಯಾಕ್‌ವರ್ಡ್ ಅಂತ ಹೇಳಿ ಮಾಡಿದರು. ಇದು ಯಾವ ರಾಜ್ಯದಲ್ಲೂ ಯಾವ ಪ್ರದೇಶದಲ್ಲೂ ಇಲ್ಲ. ನಾನು ನಿನ್ನೆಯ ದಿವಸ ಈ ಸಭೆಯಲ್ಲಿ ಮನವಿಯನ್ನು ಮಾಡುವಾಗ ಪಂಚಾಯಿತಿಗಳಲ್ಲಿ ಹರಿಜನ-ಗಿರಿಜನರಿಗೆ ಪ್ರಾತಿನಿಧ್ಯವನ್ನು ಕೊಡಬೇಕು ಮತ್ತು ಪಂಚಾಯಿತಿಯಲ್ಲಿ ಅಂದರೆ ಹಳೇ ಮೈಸೂರಿನಲ್ಲಿ ಲಂಬಾಣಿಗಳು, ಕೊರಮರು, ಹರಿಜನ-ಗಿರಿಜನರು ಶಿವಮೊಗ್ಗ ಅಂತಹ ಜಿಲ್ಲೆಗಳಲ್ಲಿ ನೂರಕ್ಕೆ ನೂರು ಜನ ಇದ್ದಾರೆ ಅಲ್ಲಿ ರಿಜರ್ವೇಷನ್ ಮಾಡಬೇಕು ಎಂದು ಹೇಳಿದೆ. ಮೇಘಾಲಯ ಮುಂತಾದ ಕಡೆಗಳಲ್ಲಿ ನೂರಕ್ಕೆ ನೂರು ಭಾಗ ರಿಜರ್ವೇಷನ್ ಇಡಬೇಕು ಎಂದು ಸುಪ್ರೀಂಕೋರ್ಟ್ ಆದೇಶ ಇದೆ. ಕಾಶ್ಮೀರದಲ್ಲಿ 60 ಭಾಗ ರಿಜರ್ವೇಷನ್ ಇದೆ. ಸುಪ್ರೀಂಕೋರ್ಟ್ ಬಾಲಾಜಿ ಕೇಸ್‌ನಲ್ಲಿ "ಸರ್ಕಾರಿ ಉದ್ಯೋಗ ಮತ್ತು ವಿದ್ಯಾಕ್ಷೇತ್ರ ಈ ಎರಡು ಕ್ಷೇತ್ರಗಳಲ್ಲೂ ಮೀಸಲು ಇಡುವಾಗ ಹರಿಜನ-ಗಿರಿಜನರು ಹಿಂದುಳಿದವರು ಇವರಿಬ್ಬರನ್ನೂ ಸೇರಿಸಿ 50 ಭಾಗಕ್ಕಿಂತ ಹೆಚ್ಚಾಗೆ ಆಗಬಾರದು ಎಂದು ಅಜ್ಞೆ ಮಾಡಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಬಾಲಾಜಿ ಕೇಸ್‌ನಲ್ಲಿ ಕೋರ್ಟ್ 50 ಪರ್ಸೆಂಟ್‌ಗಿಂತ ಹೆಚ್ಚಿಗೆ ರಿಜರ್ವೇಷನ್ ಮಾಡಬಾರದು ಎಂದು ಮಾಡಿದೆ. ಲೋಕಲ್‌ಬಾಡಿಗಳಲ್ಲಿ 50 ಪರ್ಸೆಂಟ್‌ಗಿಂತ ಹೆಚ್ಚಿಗೆ ಇದ್ದರೆ It is not against the Constitution.

ಶ್ರೀ ಎನ್. ರಾಚಯ್ಯ.— ತಾವೇ ಆಗ ಲಾ ಮಂತ್ರಿಗಳಾಗಿದ್ದಿರಿ ಎಂದು ಗೊತ್ತಾಯಿತು, ಆ ಫೈಲ್ ತರಿಸಿ ನೋಡಿದೆ. ಲಾ ಸೆಕ್ರೆಟರಿಗಳು ಆಗಿನ ಕಾಲದಲ್ಲಿ ಡೆವಲಪ್‌ಮೆಂಟ್ ಮಂತ್ರಿಗಳಾಗಿದ್ದವರ ಒಪ್ಪಿಗೆ ತೆಗೆದುಕೊಂಡು 50 ಪರ್‌ಸೆಂಟ್‌ಗಿಂತ ಹೆಚ್ಚಿಗೆ ರಿಸರ್ವೇಷನ್ ಮಾಡಬಾರದು ಎಂದು ಮಾಡಿದ್ದಾರೆ. ತಮ್ಮ ಸಿಗ್ನೇಚರ್ ಇಲ್ಲ, ನಾನು ನೋಡಿದೆ. ಜನಸಂಖ್ಯೆಗೆ ಅನುಸಾರವಾಗಿ ಯಾವುದೇ ಸ್ಥಳೀಯ ಸಂಸ್ಥೆಗಳಿಗೆ ಪ್ರಾತಿನಿಧ್ಯ ಕೊಡದೇ ಹೋದರೆ ಅದು ರಾಜ್ಯಾಂಗಕ್ಕೆ ವಿರೋಧವಾಗುತ್ತದೆ. ಹಾಗೆ ಜತ್ತಿ ಸರ್ಕಾರ ಏಕೆ ದೇವರಾಜ್ ಅರಸ್ ಸರ್ಕಾರ ಕೂಡ ಮಾಡಿವೆ. ಮಧ್ಯ ನೀವು ಇದ್ದಿರಿ, ನೀವು ಮಂತ್ರಿಗಳಾಗಿದ್ದಿರಿ, ಮಾಡಲಿಲ್ಲ.

Sri K. PUTTASWAMY.—I have not been able to follow the Hon. Minister, If he can kindly explain to be me I would be grateful.

ಶ್ರೀ ಎನ್. ರಾಚಯ್ಯ.—ನಿನ್ನೆ ಆಕ್ಟ್ ತಂದಿದ್ದೆ, ರೂಲ್ ತಂದಿದ್ದೆ. ಜತ್ತಿ ಸರ್ಕಾರ 1959ನೇ ಇಸವಿಯಲ್ಲಿ ವಿಲೇಜ್ ಪಂಚಾಯಿತಿ ಆಕ್ಟ್ ಮಾಡಿದರು. ಅದರಲ್ಲಿ ಸೇರಿಸಿದ್ದಾರೆ, ಹರಿಜನ-ಗಿರಿಜನರಿಗೆ ಪಂಚಾಯಿತಿಗಳಲ್ಲಿ, ತಾಲ್ಲೂಕ್ ಬೋರ್ಡ್‌ಗಳಲ್ಲಿ ಪ್ರಾತಿನಿಧ್ಯ ಕೊಡುವಾಗ ಜನಸಂಖ್ಯೆಗೆ ಅನುಸಾರವಾಗಿ ಕೊಡಬೇಕು ಎಂದು ರೂಲ್ 3-4ರಲ್ಲಿ ಕೂಡ ಇದೆ. 5ನೆಯದರಲ್ಲೂ ಕೂಡ ಇದೆ. 1963ನೇ ಇಸವಿಯಲ್ಲಿ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಯಾರೋ ಒಬ್ಬರು ಪ್ರಶ್ನೆ ಎತ್ತಿದರು ಎಂದು ಆಗಿನ ಕಾಲಕ್ಕೆ ಡೆವಲಪ್‌ಮೆಂಟ್ ಮಂತ್ರಿಗಳು ಲಾ ಸೆಕ್ರೆಟರಿ ಒಪಿನಿಯನ್ ತೆಗೆದುಕೊಂಡು

ಅದನ್ನು ತಿದ್ದುಪಡಿಮಾಡಿದರು. ಅದರಲ್ಲಿ "ನಾಟ್‌ವಿತ್‌ಸ್ಟ್ಯಾಂಡಿಂಗ್ " ಎನ್ನತಕ್ಕ ಪದ ಸೇರಿಸಿಬಿಟ್ಟು ಹರಿಜನ-ಗಿರಿಜನರಿಗೆ ಮತ್ತು ಹೆಣ್ಣು ಮಕ್ಕಳಿಗೆ ಪಂಚಾಯಿತಿಗಳಲ್ಲಿ ಪ್ರಾತಿನಿಧ್ಯ ಕೊಡುವಾಗ ಪ್ರಪೋರ್ಷನೇಟಾಗಿ ಕೊಡಬೇಕು ಎಂದು ಇದೆ. ಶ್ರೀಮಾನ್ ಪುಟ್ಟಸ್ವಾಮಿಯವರ ಕಾಲದಲ್ಲಿ ಏನಾಗಿದೆಯೆಂದರೆ, ಹೆಣ್ಣು ಮಕ್ಕಳಿಗೆ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ರಿಜರ್ವೇಷನ್ ಮಾಡುವಾಗ 50 ಭಾಗಕ್ಕಿಂತ ಹೆಚ್ಚಿಗೆ ರಿಜರ್ವೇಷನ್ ಮಾಡಬಾರದು ಎಂದು ತಿದ್ದುಪಡಿ ಮಾಡಿ ಅದರಲ್ಲಿ ಸೇರಿಸಿದ್ದಾರೆ. ಅದು ರೂಲ್ ಮಾಡಿರತಕ್ಕದು ಅದನ್ನು ಆಕ್ಟ್‌ಗೆ ಸೇರಿಸಿಲ್ಲ, ಅದರಲ್ಲಿ ಪ್ರಪೋರ್ಷನೇಟಾಗಿ ಕೊಡಬೇಕು ಎಂದು ಇದೆ.

ಶ್ರೀ ಕೆ. ಪುಟ್ಟಸ್ವಾಮಿ.—Now, I am able to understand- ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳಿಗೂ ನನಗೂ ಏನೂ ಭಿನ್ನಾಭಿಪ್ರಾಯವಿಲ್ಲ. ಸೇಕಡ50 ಕಿಂತ ಹೆಚ್ಚು ಜನಸಂಖ್ಯೆ ಇದ್ದು ಆ ಜನಸಂಖ್ಯೆಗೆ ಅನುಸಾರವಾಗಿ ರಿಜರ್ವ್ ಮಾಡಬೇಕು, ಹೀಗೆ ಮಾಡುವುದು ಕಾನೂನಿಗೆ ವಿರೋಧವಲ್ಲ ಎನ್ನುವುದು ನನ್ನ ಅಭಿಪ್ರಾಯ. ಮಾನ್ಯ ಮಂತ್ರಿಗಳು ಇನ್ನೊಂದು ವಿಚಾರ ಹೇಳಿದರು. ಏನೆಂದರೆ, ಕಾನೂನಿನಲ್ಲಿ ಸರಿಯಾಗಿದೆ, ರೂಲ್ ಬೇರೆ ಮಾಡಿದ್ದಾರೆ ಎಂದು ಹೇಳಿದರು. ರೂಲ್ ಕಾನೂನಿಗೆ ವಿರೋಧವಾಗುತ್ತದೆ ಎಂದರೆ It is ultra vires of the Act. and therefore, it has to be struck down. ಮತ್ತೆ ಇನ್ನೊಂದು ವಿಚಾರವನ್ನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಈಗ ನಾನು ಹೇಳಿದ ಕೂಡಲೇ ತಾವು ಏನೋ ಹೇಳಿದಿರಿ, ಅವರಿಂದ ನಮಗೆ ಕೋಪ ಬರುವುದಿಲ್ಲ. ನೀವು ಹೇಳಿದ ಮಾತಿನ ಅರ್ಥ ಏನೆಂದರೆ, ಜನತಾ ಸರ್ಕಾರ ಇತ್ತು, ಆಮೇಲೆ ದೇವರಾಜ್ ಅರಸ್ ಸರ್ಕಾರ ಬಂತು, ಈ ಮಧ್ಯ ನೀವು ಇದ್ದಿರಿ, ನೀವು ಸರ್ಕಾರದ ಲಾ ಮಂತ್ರಿಗಳಾಗಿದ್ದಿರಿ, ನಿಮ್ಮ ಗಮನಕ್ಕೆ ಬಂದಿಲ್ಲ ಎಂದು. ದಯವಿಟ್ಟು ಹಾಗೆ ಹೇಳುವುದು ಬೇಡ. ಅದು ಎಲ್ಲೋ ತಪ್ಪಾಗಿ ಬಂದಿದೆ, ನನಗೆ ಗೋಚರ ಇಲ್ಲವೇ ಆಗಿರಬಹುದು, ನನಗೆ ತಿಳಿದಿಲ್ಲ, ನನ್ನ ಗಮನಕ್ಕೆ ಬಂದಿಲ್ಲ. ನನ್ನ ಗಮನಕ್ಕೆ ಬಂದಿದ್ದರೆ, take it from me, I would never have been a party. ಆದುದರಿಂದ ಅನಾವಶ್ಯಕವಾಗಿ ನಮ್ಮ ಮೇಲೆ ಹಿಂದೆ ಆದುದನ್ನು ಒಂದುರೀತಿ ರಿಫ್ಲೆಕ್ಷನ್ ಬರುವ ರೀತಿಯಲ್ಲಿ ಮಾತನಾಡುವುದು ಬೇಡ.

ಶ್ರೀ ಎನ್. ರಾಚಯ್ಯ.- ರಿಫ್ಲೆಕ್ಷನ್ ಬರುವ ರೀತಿ ಏನತ ಇಲ್ಲ. ಇಂತಹ ಒಂದು ಕಾನೂನು, ನಿಯಮವನ್ನು ರಾಜ್ಯಾಂಗದಲ್ಲಿರತಕ್ಕ ರೀತಿಯಲ್ಲಿ ಮಾಡವೇ ಅದಕ್ಕೆ ತಿರುಗು ಮುರುಗು ಮಾಡಿ ಯಾವ ಹಳ್ಳಿ, ತಾಲ್ಲೂಕು ಮಟ್ಟದಲ್ಲಿ ಇರತಕ್ಕ ಜನಗಳಿಂದ ಚುನಾಯಿತರಾಗಿ ಬಂದು ನಾವು ಅಧಿಕಾರ ತೆಗೆದುಕೊಂಡು ಇಲ್ಲಿ ಕುಳಿತಿದ್ದೀವೋ ಮತ್ತು ಕೇಂದ್ರಸರ್ಕಾರಕ್ಕೆ ಯಾರು ಅಧಿಕಾರವನ್ನು ಕೊಟ್ಟಿದ್ದಾರೋ ಆ ವರ್ಗಕ್ಕೆ ಅವರ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ವನ್ನು ಕೊಡಬಾರದು ಎಂದು ಯಾರು ಮಾಡಿದ್ದಾರೋ ಅವರಿಗೆ ಇದು ಅನ್ಯಾಯವಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ಅದಕ್ಕೆ ಏನುಮಾಡಬೇಕೋ ಅದನ್ನು that can be done in no time.

ಶ್ರೀ ಎನ್. ರಾಚಯ್ಯ.—ನಾನು ನೋಡಿದೆ, ಈ ವಿಷಯ ತಮ್ಮ ಗಮನಕ್ಕೆ ಬಂದಿಲ್ಲ. ಎನ್ನು ವುದು ನನಗೆ ಗೊತ್ತಿದೆ. ಇದರಿಂದ ತಮಗೆ ರಿಫ್ಲೆಕ್ಷನ್ ಬರಬೇಕು ಎಂದು ನನಗೆ ಉದ್ದೇಶವಿಲ್ಲ, ಆದುದರಿಂದ ಸೋಷಿಯಲೀ, ಎಜುಕೇಷನಲೀ ಬ್ಯಾಕ್‌ವರ್ಡ್ ಇರತಕ್ಕವರನ್ನೆಲ್ಲಾ ಸೇರಿಸಿದರೆ ನೂರಕ್ಕೆ 70 ಭಾಗ ಜನ ಇದ್ದಾರೆ. ಇವರಿಗೆ ನಾವಾದರೂ ನ್ಯಾಯಮಾಡಬೇಕು ಎನ್ನುವುದ ಕ್ಕೋಸ್ಕರ ನಾನು ಹೇಳುತ್ತಿದ್ದೇನೆ, ಇದನ್ನು ಏತಕ್ಕೆ ಸ್ಪಷ್ಟಪಡಿಸುತ್ತಿದ್ದೇನೆ ಎಂದರೆ, ಪ್ರಬಲ ವರ್ಗದವರು, ದುರ್ಬಲ ವರ್ಗದವರು ಎಂದು ಹೇಳಿದರೆ, ಕೆಲವರು ಎಲ್ಲೋ ನನಗೆ ಹೇಳುತ್ತಿ ದ್ದಾರೆ ಎಂದು ತಿಳಿದುಕೊಳ್ಳುತ್ತಾರೆ, ಆ ಉದ್ದೇಶ ನನಗೆ ಇಲ್ಲ, ನಾನೂ ಕೂಡ ಪ್ರಬಲ ವರ್ಗಕ್ಕೆ ಸೇರಿದವನೇ, ಹರಿಜನರಲ್ಲಿ ರಾಚಯ್ಯ ಮತ್ತು ಬಸವಲಿಂಗಪ್ಪನವರ ಮಕ್ಕಳಿಗೆ ಏಕೆ ಕನ್‌ಸೇಷನ್ ರೇಟ್ಸ್ ಮತ್ತು ವಿಶೇಷವಾದಂಥ ಅನುಕೂಲಗಳನ್ನು ಕೊಡುತ್ತೀರಿ ಎಂದು ಅನೇಕರು ಹೇಳು ತ್ತಿದ್ದಾರೆ, ನಾನು ಮತ್ತು ಬಸವಲಿಂಗಪ್ಪನವರೂ ಕೂಡ ಪ್ರತಿಪಾದನೆ ಮಾಡುತ್ತಾ ಇರುವುದು ಇದೆ, ಕೇವಲ ಹರಿಜನ ಗಿರಿಜನರಿಗೆ ಮಾತ್ರವಲ್ಲ ಹಿಂದುಳಿದಿರುವವರಿಗೆ ಮತ್ತು ಎಲ್ಲಾ ವರ್ಗದ ಬಡವರಿಗೆ ಅನುಕೂಲಗಳನ್ನು ಕೊಡಬೇಕು ಎನ್ನುವುದೇ ನಮ್ಮ ವಾದ, ರಾಜ್ಯಾಂಗದತ್ತವಾಗಿ ಯಾರೇ ಆಗಲಿ ಸ್ಟ್ರಾಂಗರ್ ಸೆಕ್ಷನ್ ಆಗಲೀ ವೀಕರ್ ಸೆಕ್ಷನ್ ಆಗಲಿ ಎಲ್ಲಾ ವರ್ಗದಲ್ಲೂ ಇರ ತಕ್ಕ ಬಡವರಿಗೆ ಎಲ್ಲಾ ಸೌಲಭ್ಯಗಳು ಸಿಗಬೇಕು ಎನ್ನುವುದು ಶ್ರೀಮತಿ ಇಂದಿರಾಜೀಯವರ, ಪಾಲಿಸಿ, ರಾಷ್ಟ್ರಪತಿಯವರ ಪಾಲಿಸಿ ಮತ್ತು ದೇವರಾಜ್ ಅರಸ್ ಸರ್ಕಾರದ ಪಾಲಿಸಿ ಎನ್ನತಕ್ಕಂಥಾದ್ದನ್ನು ಸ್ಪಷ್ಟಪಡಿಸುತ್ತಿದ್ದೇನೆ, ಇದನ್ನು ಮಾಡುವಾಗ ನಮ್ಮ ದೇಶದಲ್ಲಿ ವ್ಯಕ್ತಿ

ಯಲ್ಲ, ಜಾತಿಯಲ್ಲ ಮುಖ್ಯ,ಯಾವ ವರ್ಗದಲ್ಲಿ ಆಗಲೀ ಒಂದು ಗ್ರೇಡ್ ಹಾಕಿ, ಆ ಗೆರೆ ಕೆಳಗಡೆ, ಯಾರು ಬರುತ್ತಾರೆ ಅವರಿಗೆ ಆರ್ಥಿಕವಾಗಿಯಾಗಲೀ, ಸಾಮಾಜಿಕವಾಗಿಯಾಗಲಿ, ಉದ್ಯೋಗದಲ್ಲಿ ಯಾಗಲೀ ಎಲ್ಲಾ ಕ್ಷೇತ್ರಗಳಲ್ಲೂ ಸೌಲಭ್ಯಗಳನ್ನು ಒದಗಿಸಬೇಕು.

ಮಾನ್ಯ ಅಧ್ಯಕ್ಷರೇ 39–40ನೇ ಆರ್ಟಿಕಲನ್ನು ತಮ್ಮ ಮುಂದೆ ನಿವೇದನೆ ಮಾಡುವಾಗ ಮುಂದುವರಿದ ಹಾಗೂ ಯಾರು ಸ್ಟ್ರಾಂಗರ್ ಸೆಕ್ಷನ್ ಪ್ರಬಲ ವರ್ಗಗಳೆಂದು ಹೇಳುತ್ತಾರೋ ಆ ವರ್ಗಗಳಲ್ಲೂ ಕೂಡ ಹೆಲ್ಪ್‌ಲೆಸ್ ಪೀಪಲ್ಸ್ ಇದ್ದಾರೆ; ಇವರಿಗೂ ಹಾಗೂ ಹರಿಜನರಿಗೆ, ಗಿರಿಜನರಿಗೆ ಹಾಗೂ ನಿಸ್ಸಹಾಯಕರು ಯಾರಿದ್ದಾರೆ ಅವರೆಲ್ಲರಿಗೂ ಕೂಡ ಹಣಕಾಸಿನ ಸೌಲಭ್ಯವನ್ನು, ವೈದ್ಯಕೀಯ ಸೌಲಭ್ಯವನ್ನು, ವಿದ್ಯಾಸೌಲಭ್ಯಗಳನ್ನೂ ಎಲ್ಲಾ ಸೌಲಭ್ಯಗಳನ್ನೂ ಕೊಡಬೇಕು ಎನ್ನತಕ್ಕಂಥದ್ದನ್ನು 39—40ನೇ ಆರ್ಟಿಕಲ್‌ನಲ್ಲಿ ಸೇರಿಸಿದ್ದೇವೆ. ಈ ಸಭೆಯ ಗಮನಕ್ಕೆ ಅದರ ಬಗ್ಗೆ ಇನ್ನು ಹೆಚ್ಚಿನ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದಿದ್ದೆ ಅದರೆ ಮಾನ್ಯ ಪಬ್ಲಿಕ್ ವರ್ಕ್ಸ್ ಮಂತ್ರಿಗಳಾದ ಚನ್ನಬಸಪ್ಪನವರು ಅವರ ಉತ್ತರದಲ್ಲಿ ಹೇಳುತ್ತಾರೆ. ಈಗಾಗಲೇ ನಾನು ಸಾಕಷ್ಟು ಸಮಯವನ್ನು ತೆಗೆದುಕೊಂಡಿದ್ದೇನೆ. ನಾನು ಇನ್ನೂ 1—2 ಗಂಟೆಗಳಷ್ಟು ಮಾತನಾಡಬಹುದು ಆದರೆ ಕಾಲಾವಕಾಶವಿಲ್ಲ. ಇನ್ನೂ ಅನೇಕ ವಿಷಯಗಳನ್ನೂ ಹೇಳಬೇಕೆಂದು ಪಟ್ಟಿಯನ್ನು ಮಾಡಿಕೊಂಡು ಬಂದಿದ್ದೇನೆ ಅದನ್ನು ಹೇಳಿದ್ದರೆ ತಾವು ನಮ್ಮ ಸರ್ಕಾರದವರ ಬೆನ್ನು ತಟ್ಟುತ್ತಿದ್ದಿರಿ. ನಾವು ಕಳೆದ ಒಂದು ವರ್ಷದಲ್ಲಿ 10 ವರ್ಷದಲ್ಲಿ ಆಗದೇ ಇರತಕ್ಕಂಥ ಕೆಲಸಗಳನ್ನು ಮಾಡಿದ್ದೇವೆ.

5-30 P.M.

ಇನ್ನೊಂದು ವಿಷಯ ಹೇಳುವುದನ್ನು ಮರೆತು ಬಿಟ್ಟಿದ್ದೆ. ಅದನ್ನು ಹೇಳಿಬಿಡುತ್ತೇನೆ. ಹೆದರಿಕೆಯಿಂದ ಇರತಕ್ಕಂಥ ಜನಗಳಿಗೆ ವಿಶೇಷ ರಕ್ಷಣೆ ಕೊಡಬೇಕೆಂದು ರಾಜ್ಯಾಂಗದಲ್ಲೂ ಕೂಡ ಇದೆ. ರಾಜ್ಯಾಂಗ ದತ್ತವಾಗಿಯೂ ಅವರಿಗೆ ರಕ್ಷಣೆ ಕೊಡಬೇಕೆಂದು ಇದೆ. ನಮ್ಮ ಪ್ರಧಾನ ಮಂತ್ರಿಗಳು 1975ನೇ ಆಗಸ್ಟ್ 2 ನೇ ತಾರೀಖು ನಮ್ಮ ರಾಜ್ಯ ಸರ್ಕಾರಕ್ಕೆ ಒಂದು ಆದೇಶವನ್ನು ಕಳುಹಿಸಿಕೊಟ್ಟಿದ್ದಾರೆ. ಹರಿಜನ ಗಿರಿಜನ ಮೇಲೆ ದಬ್ಬಾಳಿಕೆ, ದೌರ್ಜನ್ಯಗಳು ಆಗಾಗ ನಡೆಯುತ್ತಲೇ ಇವೆ. ಅದು ದಿನಪತ್ರಿಕೆಯಲ್ಲಿ ಮೇಲಿಂದ ಮೇಲೆ ಬರುತ್ತಿದೆ ಆದುದರಿಂದ ಮುಖ್ಯ ಮಂತ್ರಿಗಳೂ ಕೂಡಲೇ ಇವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದಪ್ರಕಾರ, ಎಲ್ಲಾ ಜಿಲ್ಲಾಧಿಕಾರಿಗಳು, ಪೋಲೀಸ್ ಸೂಪರಿಂಟೆಂಡ್‌ರವರಿಗೂ, ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರಿಗೂ ಆದೇಶ ಕೊಟ್ಟು ಅವರ ಪ್ರಾಣ ಹಾನಿ ಮಾನ ಹಾನಿ, ಆಸ್ತಿಪಾಸ್ತಿಗಳ ಬಗ್ಗೆ, ಹೆಣ್ಣು ಮಕ್ಕಳ ಒಂದು ಆತ್ಮ ರಕ್ಷಣೆಯ ಬಗ್ಗೆ ಮಕ್ಕಳ ರಕ್ಷಣೆಯ ಬಗ್ಗೆ ಕ್ರಮ ತೆಗೆದು ಕೊಳ್ಳಬೇಕೆಂದು ತಿಳಿಸಿದ್ದೇವೆ. ಅದಕ್ಕೆ ಅನುಗುಣವಾಗಿ ನಾವು ಒಬ್ಬ ಸೀನಿಯರ್ ಎಸ್. ಪಿ. ಗ್ರೇಡಿನ ಅಧಿಕಾರಿಯನ್ನು ಹಾಕಿ ಸಿವಿಲ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಅಂತ ಒಂದು ಸೆಲ್ ಮಾಡಿದ್ದೇವೆ. ಸುಮಾರು ಇಲ್ಲಿಯವರೆಗೆ 300ಕ್ಕಿಂತಲೂ ಹೆಚ್ಚಿನ ದೌರ್ಜನ್ಯ ಹರಿಜನರ ಮೇಲೆ ಆಗಿರತಕ್ಕಂಥದ್ದು ಸರ್ಕಾರದವರ ಗಮನಕ್ಕೆ ಬಂತು, ಅವುಗಳನ್ನು ಆ ಸೆಲ್‌ಗೆ ರೆಫರ್ ಮಾಡಿದ್ದೇವೆ. ವಿಶೇಷವಾಗಿ ವಿಚಾರಣೆ ಮಾಡಿ ಅವರಿಗೆ ರಕ್ಷಣೆ ಕೊಡತಕ್ಕಂಥ ವ್ಯವಸ್ಥೆ ಮಾಡುತ್ತಿದ್ದೇವೆ. ಮತ್ತು ಇದರ ಜೊತೆಗೆ ಅವರಿಗೆ ಕೆಲವು ಕಡೆಗಳಲ್ಲಿ ಅವರ ಆಸ್ತಿಪಾಸ್ತಿ, ಸಿವಿಲ್ ರೈಟ್ಸ್ ಏನಿದೆ, ರಾಜ್ಯಾಂಗ ದತ್ತವಾಗಿ ಕೊಡಬೇಕಾದ ಹಕ್ಕುಗಳು ಏನಿವೆ ಅವುಗಳನ್ನು ದೊರಕಿಸಿಕೊಡುವುದಕ್ಕಾಗಿ, ಯಾರೋ ಒಬ್ಬ ಲಾಯರ್‌ಗೆ ಆ ಕೆಲಸವನ್ನು ವಹಿಸುವುದಕ್ಕೆ ಬದಲಾಗಿ ಖಾಯಂ ಆದ ಒಬ್ಬ ಲಾಯರ್‌ರವರು ಹರಿಜನ ಗಿರಿಜನರಿಗೆ ರಿಜರ್ವೇಷನ್ ಇರುವ ತನಕ ಅವರ ಹಕ್ಕುಬಾಧ್ಯತೆಗಳ ವಿಚಾರದಲ್ಲಿ ಮತ್ತು ಅಸ್ಪೃಶ್ಯತೆ ನಿವಾರಣೆಯ ಕಾನೂನನ್ನು ಜಾರಿಗೆ ತರತಕ್ಕಂಥ ಕಾಲದಲ್ಲಿ ಅವರಿಗೆ ಅನುಕೂಲವಾಗುವುದಕ್ಕೋಸ್ಕರವಾಗಿ ನೇಮಕ ಮಾಡಿದ್ದೇವೆ. ಅವರ ಯಾವುದೇ ಕೇಸ್ ಯಾವುದೇ ಕೋರ್ಟಿಗೆಹೋಗಲಿ ಲೇಬರ್ ಕೋರ್ಟಿಗೇ ಹೋಗಲಿ, ಇಲ್ಲ ಸಿವಿಲ್ ಕೋರ್ಟಿಗೆ ಹೋಗಲಿ, ಪ್ರತಿಯೊಂದು ಜಿಲ್ಲೆಯಲ್ಲೂ ಒಬ್ಬ ವಕೀಲರನ್ನು ಸಮಾಜ ಕಲ್ಯಾಣ ಇಲಾಖೆಯ ಪರವಾಗಿ ನೇಮಿಸುವುದಕ್ಕೆ ಈಗಾಗಲೇ ಆಜ್ಞೆಯನ್ನು ಹೊರಡಿಸಿದ್ದೇವೆ. ಮತ್ತು ಇನ್ನು ಸ್ವಲ್ಪ ದಿವಸಗಳಲ್ಲಿಯೇ ಆ ವಕೀಲರುಗಳನ್ನು ನೇಮಕ ಮಾಡತಕ್ಕಂಥವರಿದ್ದೇವೆ. ಮತ್ತು ಅವರಿಗೆ ಹಣಕಾಸಿನ ಅನುಕೂಲತೆಗಾಗಿ ಈಗಾಗಲೇ ಒಂದು ಕಾರ್ಪೊರೇಷನ್‌ನ್ನು ಮಾಡಿದ್ದೇವೆ. ಇದಕ್ಕೆ ಈಗಾಗಲೇ ಕ್ಯಾಬಿನೆಟ್‌ನಲ್ಲಿ ಅನುಮತಿಯನ್ನು ತೆಗೆದುಕೊಂಡಿದ್ದೇವೆ. ಅದನ್ನು ಗೌವರ್ನಮೆಂಟಿನವರಿಗೆ ಕಳುಹಿಸಿ ಅವರಿಂದ ಆದೇಶ ಬಂದಮೇಲೆ ಕಾರ್ಯಗತ ಮಾಡಲು ಉದ್ಘಾಟನೆ ಮಾಡಬೇಕು ಎನ್ನತಕ್ಕಂಥದ್ದು ಇದೆ. ಈ ಕಾರ್ಪೊರೇಷನ್ನಿನ ಉದ್ದೇಶವೇನೆಂದರೆ, ಹರಿಜನ ವಿದ್ಯಾವಂತರಿಗೆ 18 ಪರ್ಸೆಂಟ್ ಮಾತ್ರ ಕೆಲಸ ಸಿಕ್ಕಿ ಬಾಕಿಯವರಿಗೆ ಕೆಲಸ ಸಿಗದಿದ್ದರೆ, ಅಂಥವರು ಏನಾದರೂ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಿದ್ದರೆ

ಅಥವಾ ವ್ಯವಸಾಯ ಪಶುಪಾಲನೆ ಅಥವಾ ಇನ್ನು ಯಾವುದೇ ತರಹದ ಬಾರ್‌ಬರ್ ಕೆಲಸ, ಅಥವಾ ಇನ್ನು ಯಾವುದೇ ತರಹದ ಪ್ರೆಸ್ ಇಡಲಿ, ಅವರಿಗೆ ಈ ಹಣಕಾಸಿನ ಸಂಸ್ಥೆಯಿಂದ, ಅವರ ವರ ವೃತ್ತಿಯನ್ನು ಅವರು ಬೆಳೆಸಿಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ. ಇದರಿಂದ ಅವರ ಆರ್ಥಿಕ ಪರಿಸ್ಥಿತಿಯನ್ನು ಅವರು ಸುಧಾರಿಸಿಕೊಂಡು ದೇಶದಲ್ಲಿ ಅವರು ಸಹ ಮರ್ಯಾದೆಯಿಂದ ಬಾಳಬಹುದು. ನಮಗೂ ಕೂಡ ಒಂದು ಉದ್ಯೋಗವಿದೆ, ನಮಗೂ ಒಂದು ಖಾಯಂ ಸಂಪಾದನೆ ಇದೆ ಇದರಿಂದ ನಾವು ದೇಶದಲ್ಲಿ ನೆಮ್ಮದಿಯಿಂದ ಬಾಳಬಹುದು, ಬದುಕಬಹುದು ಎನ್ನತಕ್ಕಂಥ ಭಾವನೆಯನ್ನು ಸೃಷ್ಟಿಮಾಡಿ ಅವರಿಗೆ ಅನುಕೂಲ ಮಾಡಬೇಕು ಎನ್ನತಕ್ಕಂಥದ್ದೇ ಈ ರೀತಿ ಧನ ಸಹಾಯ ಮಾಡತಕ್ಕಂಥ ಉದ್ದೇಶ. ನಾನು ಇಷ್ಟು ವಿಷಯಗಳನ್ನು ಹೇಳಿರುವುದರಿಂದ ಮಾನ್ಯ ಸದಸ್ಯರೆಲ್ಲರಿಗೂ ಇದರಿಂದ ಸಮಾಧಾನವಾಗಿರಬಹುದು.

ಶ್ರೀ ಪಿ. ಎಂ. ಬಂಗಿ.—ಗ್ರಾಮ ಪಂಚಾಯಿತಿಗಳಲ್ಲಿ, ತಾಲ್ಲೂಕ್ ಬೋರ್ಡ್‌ಗಳಲ್ಲಿ ಟೌನ್, ಪಂಚಾಯಿತಿಗಳಲ್ಲಿ 18 ಪರ್ಸೆಂಟ್‌ನಷ್ಟು ಹಣವನ್ನು ಬಡ್ಜೆಟ್‌ನಲ್ಲಿ ಹರಿಜನರಿಗೋಸ್ಕರ ಹಣ ಇಟ್ಟಿದ್ದೇವೆಂದು ತಾವು ಈಗ ತಾನೇ ಹೇಳಿದಿರಿ. ಆದರೆ ಆ ಇಂಪ್ಲಿಮೆಂಟೇಷನ್ ಇಲ್ಲಿಯವರೆಗೂ ಆಗಿಲ್ಲ. ನಾವು ಪತ್ರ ಬರೆದು ಕೇಳಿದರೂ ಅವಕ್ಕೆ ಉತ್ತರವೇ ಬರುವುದಿಲ್ಲ. 18 ಪರ್ಸೆಂಟ್‌ನ್ನು ಹರಿಜನ ಗಿರಿಜನರಿಗೋಸ್ಕರ ಕೊಟ್ಟಿದ್ದೇವೆಂದು ತಾವು ಈಗ ತಾನೇ ಹೇಳಿದಿರಿ ಅದರೆ ಗ್ರಾಮ ಪಂಚಾಯಿತಿಯವರು, ತಾಲ್ಲೂಕ್ ಬೋರ್ಡಿನವರು ಇಲ್ಲಿಯವರೆಗೆ ಇಂಪ್ಲಿಮೆಂಟ್ ಮಾಡಿಲ್ಲ, ಆ ವಿಷಯವನ್ನು ತಮ್ಮ ಗಮನಕ್ಕೆ ತಂದುಕೊಡುತ್ತಾ, ಆ ಹಣ ಏನಿದೆ ಅವರಿಗೆ ಅದನ್ನು ಕೊಡಬೇಕೆಂದು ತಾವು ತೀರ್ಮಾನ ಮಾಡಿದ್ದೇವೆಂದು ಬರೀ ಕೆಲವು ಘೋಷಣೆಗಳನ್ನು ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಯಾವ ಹಳ್ಳಿಯಲ್ಲಿಯೂ ಹರಿಜನರಿಗೆ ಸೈಟ್ಸ್‌ಗಳು ಸಿಕ್ಕಿಲ್ಲ. ಯಾವ ಪರಿಹಾರವೂ ಹರಿಜನರಿಗೆ ಸಿಕ್ಕಿಲ್ಲ. ಇವತ್ತಿಗೂ ಹರಿಜನರು ಸಾರ್ವಜನಿಕ ಭಾವಿಗಳಿಂದ ನೀರನ್ನು ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿ ಇಲ್ಲ. ಅವರು ಭಿಕ್ಷೆ ಬೇಡಿ ನೀರನ್ನು ಪಡೆಯಬೇಕಾದಂಥ ಪರಿಸ್ಥಿತಿ ಇನ್ನೂ ಇದೆ. ಆದುದರಿಂದ ಈ ವಿಷಯಗಳ ಕಡೆಗೆ ತಾವು ಗಮನ ಕೊಡಬೇಕು. ತಾವು ಏನು ಆಜ್ಞೆಗಳನ್ನು ಹೊರಡಿಸುತ್ತೀರಿ ಅದು ಕೆಳಗಿನ ತನಕ ಮುಟ್ಟಬೇಕು, ಅವರಿಗೂ ಪರಿಹಾರ ಸಿಕ್ಕಬೇಕು ಆ ದೃಷ್ಟಿಯಿಂದ ನಾವು ಈ ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ. ಸೈಟ್ಸ್ ವಿಷಯ ಹೇಳುವುದಾದರೆ, ಅಕ್ವಿಜಿಷನ್ ಪ್ರೊಸೀಡಿಂಗ್ಸ್‌ಗಳು ಎಲ್ಲೆಲ್ಲೋ ಸೆಕ್ರೆಟರಿಯೇಟ್ ಲೆವೆಲ್‌ನಲ್ಲೋ, ಎಲ್ಲೋ ಪ್ರೋಗ್ರೆಸ್ ಇಲ್ಲದೇನೇ ಬಿದ್ದು ಹೋಗಿದೆ. ಷೆಡ್ಯೂಲ್ ಕ್ಯಾಸ್ಟ್, ಟ್ರೈಬ್ಸ್‌ನವರಿಗೆ ಸಮಾಧಾನವಾಗುವುದಕ್ಕೆ ಏನು ಆಜ್ಞೆಯನ್ನು ಮಾಡುತ್ತೀರಿ ಅವೆಲ್ಲಾ ಇಂಪ್ಲಿಮೆಂಟ್ ಆಗುವ ದೃಷ್ಟಿಯಿಂದ ತಾವು ಸಾಕಷ್ಟು ಪ್ರಯತ್ನ ಮಾಡಬೇಕು.

ಶ್ರೀ ಎನ್. ರಾಚಯ್ಯ.—ತಾವು ಹೇಳಿದ ರೀತಿಯಲ್ಲಿ, ಹೌಸಿಂಗ್ ವಿಷಯದ ಬಗ್ಗೆ ಈಗಾಗಲೇ ನಾವು ಆಜ್ಞೆಯನ್ನು ಮಾಡಿರುತ್ತೇವೆ. ಈಗಾಗಲೇ ಇದಕ್ಕೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ಅಭಿವೃದ್ಧಿ ಅಧಿಕಾರಿಗಳಿಗೂ ಕೂಡ ಆದೇಶ ಕೊಟ್ಟಿದ್ದೇವೆ. ನಿಮ್ಮ ಜಿಲ್ಲೆಯಲ್ಲಿ ಸುಮಾರು 15 ಲಕ್ಷದ 8) ಸಾವಿರ ರೂಪಾಯಿಗಳನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ಖರ್ಚು ಮಾಡುತ್ತಿದ್ದೇವೆ. ತಾವು ಹೇಳಿರತಕ್ಕಂಥದ್ದೆಲ್ಲಾ ಸರಿಯಲ್ಲ. ಹಿಂದಿನ ವರ್ಷಗಳಿಗಿಂತ ಈ ವರ್ಷ ನಾವು ಹೆಚ್ಚಿನ ಪ್ರಮಾಣದಲ್ಲಿ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ತಾವು ಏನೇನು ಸಲಹೆಗಳನ್ನು ಮಾಡಿದ್ದೀರಿ ಅವುಗಳನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು, ಆ ಸೌಲಭ್ಯಗಳನ್ನು ಜಾರಿಗೆ ತರುವ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇನೆಂದು ಭರವಸೆ ಕೊಡುತ್ತೇನೆ. ತಾವು ಹೇಳಿರತಕ್ಕಂಥ ಸಲಹೆ ಸೂಕ್ತವಾಗಿದೆ.

Sri PRABHAKAK TELKAR.—In all the villages, the Peoples' Housing Scheme is taken up. The concerned Officer asks them to pay Rs. 500. All these Harijans and Girijans are not in a position to pay Rs. 500. and recently some order has been issued that is what the Hon. Minister has told me; but, wherever, we asked the B. D. Os. to pay that Rs 500 out of 18 per cent budget that is earmarked to spend for these people in T.D.Bs. they are not paying. If some immediate action is taken, the poor people will get their houses constructed as soon as possible.

Sri N. RACHAIAH.—I have already passed an order, six months back, stating that wherever SCs and STs people are provided with these houses under Peoples' Housing Scheme, if they are unable to

pay this Rs. 500 contribution, then, that amount could be adjusted out of 18 per cent budget amount of the T.D.B. earmarked for these people and see that houses are provided to them. ಈ ವಿಷಯದ ಬಗ್ಗೆ ಈಗಾಗಲೇ ಆಜ್ಞೆಯನ್ನು ಕಳುಹಿಸಿದ್ದೇವೆ. ಆದರೆ ಮಾನ್ಯ ಬಂಗಿಯವರೇನು ಗ್ರಾಮ ಪಂಚಾಯಿತಿಗಳಿಗೆ, ಟೌನ್ ಪಂಚಾಯಿತಿಗಳಿಗೆ ಈ ವಿಚಾರದಲ್ಲಿ ಇನ್ನೂ ಆಜ್ಞೆಯನ್ನು ಕಳುಹಿಸಿ ಕೊಟ್ಟಿಲ್ಲ ವೆಂದು ಹೇಳಿ ದರು, ಈ ವಿಚಾರದಲ್ಲಿ ಯಾವುದನ್ನು ಖರ್ಚು ಮಾಡಬೇಕು ಎನ್ನುವ ಬಗ್ಗೆ ಆಜ್ಞೆಯನ್ನು ಕಳುಹಿಸಿ ಕೊಡುತ್ತೇವೆ. ಮೈಸೂರಿನಲ್ಲಿ, ಗುಲ್ಬರ್ಗದಲ್ಲಿ ಇನ್ನೂ ಇತರೆ ಕಡೆಗಳಲ್ಲಿ ನಾನಾ ತರಹದಲ್ಲಿ ಖರ್ಚುಮಾಡುತ್ತಿದ್ದೇವೆ. ತಾವು ಹೇಳುವ ರೀತಿಯಲ್ಲಿ ನಿರ್ದಿಷ್ಟವಾಗಿ ಸ್ಥಳೀಯ ಸಂಸ್ಥೆಗಳು ಮಾಡುತ್ತಾ ಇಲ್ಲ. ಈ ವಿಷಯದಲ್ಲಿ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಪ್ರಸ್ತಾಪ ಮಾಡಿ ಇಬ್ಬರೂ ಸೇರಿ ಆಜ್ಞೆಯನ್ನು ಕಳುಹಿಸಿದ್ದೇವೆ. ನನ್ನ ಪ್ರವಾಸ ಕಾಲದಲ್ಲಿ ಜಿಲ್ಲಾಧಿಕಾರಿಗಳು ಹೇಳಿದರು ಲೆದರ್ ವರ್ಕ್, ವೀವಿಂಗ್ ಯಾವುದೇ ಕಾಟೇಜ್ ಇಂಡಸ್ಟ್ರಿ ಮಾಡಬೇಕಾದರೂ, ಅವರ ಎಕನಾಮಿಕ್ ಇಂಪ್ರೂವ್‌ಮೆಂಟ್ ಆಗುವುದಕ್ಕೆ ಈ 18 ಪರ್ಸೆಂಟ್ ಹಣದಲ್ಲಿ ಜಿಲ್ಲಾಧಿಕಾರಿಗಳು ಜವಾಬ್ದಾರಿಯನ್ನು ತೆಗೆದುಕೊಂಡು ಮಾಡುವುದಾದರೆ ಅದನ್ನೂ ಅವರ ವಿವೇಚನೆಗೆ ಬಿಡುವುದು ಒಳ್ಳೆಯದು ಎಂದು ಇದೆಲ್ಲವನ್ನೂ ಕೂಡ ಪರಿಶೀಲನೆ ಮಾಡಿ ಸೂಕ್ತ ಆಜ್ಞೆಯನ್ನು ಜರೂರಾಗಿ ಕಳುಹಿಸಿಕೊಡುತ್ತೇವೆ.

ಶ್ರೀ ಕೆ ಯಂಕಟಪ್ಪ.—ನನ್ನ ಮಿತ್ರರು ಈ 18 ಪರ್ಸೆಂಟ್ ಹಣದಲ್ಲಿ ಜನತಾ ಹೌಸಿಂಗ್ ಸ್ಕೀಂಗೂ ಕೊಡಿ, ಕೆಲವು ಇಂಡಸ್ಟ್ರಿಗಳನ್ನು ಪ್ರಾರಂಭ ಮಾಡುವುದಕ್ಕೂ, ಕೊಡಿ ಎಂದು ಹೇಳುತ್ತಿದ್ದಾರೆ. ಒಂದು ತಾಲ್ಲೂಕು ಬೋರ್ಡಿನಲ್ಲಿ 18 ಪರ್ಸೆಂಟ್ ಬಡ್ಜೆಟ್‌ನಲ್ಲಿ ಎಷ್ಟು ಇದೆ ಅದನ್ನು ಯಾವ ಯಾವುದಕ್ಕೆ ಉಪಯೋಗ ಮಾಡುವುದಕ್ಕಾಗುತ್ತದೆ ?

ಶ್ರೀ ಎನ್. ರಾಚಯ್ಯ.—ಅಷ್ಟೇ ಅಲ್ಲ, ಒಂದೊಂದು ತಾಲ್ಲೂಕಿನಲ್ಲೂ ಹೆಚ್ಚು ಹಣ ಬರುತ್ತದೆ ಒಂದೊಂದು ತಾಲ್ಲೂಕಿನಲ್ಲಿ ಬರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರು ನಾರ್ತ್ ತಾಲ್ಲೂಕು ತೆಗೆದುಕೊಂಡರೆ, ಬೇಕಾದಷ್ಟು ರೆವಿನ್ಯೂ ಹಣ ಬರುತ್ತದೆ. ಮಂಡ್ಯ ತೆಗೆದುಕೊಂಡರೆ ಬೇಕಾದಷ್ಟು ಬರುತ್ತದೆ. ಇನ್ನು ಕೆಲವು ತಾಲ್ಲೂಕುಗಳಲ್ಲಿ ಬರುವ ಹಣ ಅಲ್ಲಿನ ಕರ್ಚಿಗೇ ಸಾಲುವುದಿಲ್ಲ. ನಾವು ನಿರೀಕ್ಷೆಣೆ ಮಾಡಿದ್ದಕ್ಕಿಂತಲೂ ಕಡಿಮೆ ಹಣ ಬಂದರೆ ಅವರಿಗೆ ಸೌಲಭ್ಯಗಳನ್ನು ಕೊಡಿಸುವುದಕ್ಕಾಗುವುದಿಲ್ಲ.

ಶ್ರೀ ಕೆ. ಯಂಕಟಪ್ಪ.-ಸ್ವಾಮಿ, ಜಯಂತಿ ವಿಲೇಜ್ ಎಂದು ಸೇರಿಸಿದ್ದೀರಿ, ಈ ಜಯಂತಿ ವಿಲೇಜ್ ಆದಮೇಲೆ, ಅಲ್ಲಿ ಕುಡಿಯುವ ನೀರಿಲ್ಲ, ಮನೆ ಇಲ್ಲ, ಸ್ಕೂಲ್, ಲೈಟಿಂಗ್ ಇಲ್ಲ ಇಲ್ಲ, ರೋಡ್ ಇಲ್ಲ ಇದು ಯಾವುದೂ ಇಲ್ಲ, ಇದನ್ನು ಕೇಳಿದರೆ ಅದು ಬಂದಿಲ್ಲ, ಇದು ಬಂದಿಲ್ಲ, ಇಂಡಿವಿಜುಯಲ್ ಡಿಪಾರ್ಟ್‌ಮೆಂಟ್‌ನವರು ಮಾಡಬೇಕು ಎಂದು ಹೇಳುತ್ತಾರೆ. ಎಲೆಕ್ಟ್ರಿಸಿಟಿ ಬಗ್ಗೆ ಕೇಳಿದರೆ, ಎಲೆಕ್ಟ್ರಿಸಿಟಿ ಬೋರ್ಡ್‌ನವರು ಮಾಡಬೇಕು ಎಂದು ಹೇಳುತ್ತಾರೆ, ಮನೆ ಕಟ್ಟುವ ಬಗ್ಗೆ ಕೇಳಿದರೆ, ಹೌಸಿಂಗ್ ಬೋರ್ಡ್‌ನವರು ಮಾಡಬೇಕೆಂದು ಹೇಳುತ್ತಾರೆ, ರೋಡ್ ಕೇಳಿದರೆ ಪಿ.ಡಬ್ಲ್ಯು.ಡಿ.ನವರು ಮಾಡಬೇಕೆಂದು ಹೇಳುತ್ತಾರೆ. ಆದುದರಿಂದ ಈ ಕಾರ್ಯಕ್ರಮಗಳನ್ನೆಲ್ಲಾ ಒಬ್ಬರೇ ಜವಾಬ್ದಾರಿ ತೆಗೆದುಕೊಂಡರೆ ಮುಗಿಸುವುದಕ್ಕಾಗುತ್ತದೆಯೆಂದು ಹೇಳಬಯಸುತ್ತೇನೆ.

ಶ್ರೀ ಎನ್. ರಾಚಯ್ಯ.—ಇದು ಕೇಂದ್ರ ಸರ್ಕಾರದ ಯೋಜನೆ. ಇದನ್ನು 1972ನೇ ಇಸವಿಯಲ್ಲಿ ಜಾರಿಗೆ ಕೊಟ್ಟಿದ್ದಾರೆ. ಕೆಲವು ಕಡೆ ಜಯಂತಿ ಗ್ರಾಮವನ್ನು ಚೆನ್ನಾಗಿ ಕಟ್ಟಿದ್ದಾರೆ, ಇನ್ನು ಕೆಲವು ಕಡೆ ನೀವು ಹೇಳುವಂತಹ ರೀತಿಯಲ್ಲಿ ಸಂಪೂರ್ಣವಾಗಿ ಕಟ್ಟಿಲ್ಲ. ಅಂಥಾದ್ದನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಅದನ್ನು ಬೇರೆ ಇಲಾಖೆಯಿಂದ ಅಥವಾ ತಾಲ್ಲೂಕು ಬೋರ್ಡ್‌ನಿಂದ ಹಣ ಕೊಟ್ಟು ಸರಿಯಾದ ವ್ಯವಸ್ಥೆ ಮಾಡುವ ರೀತಿಯಲ್ಲಿ ಮಾಡೋಣ

ಶ್ರೀ ಪ್ರಭುರಾಜ ಪಾಟೀಲ್.—ಮಾನ್ಯ ಸಚಿವರು ಹೇಳಿದರು ಮನೆ ಇಲ್ಲದವರಿಗೆ ಸೈಟುಗಳನ್ನು ಕೊಡುತ್ತೇವೆ ಎಂದು. ಇದು ಬಹಳ ಒಳ್ಳೆಯ ಕಾರ್ಯಕ್ರಮ. ಇದೇ ಸಮಯದಲ್ಲಿ ಒಂದು ಮಾತು ಹೇಳುತ್ತೇನೆ. ಕೆಲವು ಕಡೆ ಹರಿಜನರಿಗೆ ಮನೆ ನಿವೇಶನಗಳಿವೆ ಇನ್ನು ಕೆಲವು ಕಡೆ ಕೆಲವರಿಗೆ ಮನೆಗಳಿದ್ದೂ ಅವು ಬಿದ್ದು ಹೋಗುವ ಸ್ಥಿತಿಯಲ್ಲಿವೆ. ಅಂಥ ಕಡೆ ಮುನ್ನೂರು ನಾನೂರು ರೂಪಾಯಿಗಳನ್ನು ಖರ್ಚುಮಾಡಿದರೆ ಅವರಿಗೆ ಇರಲಿಕ್ಕೆ ಅನುಕೂಲವಾಗುತ್ತದೆ. ಆದುದರಿಂದ ತಾವು ಇಂಥ ಚಿಕ್ಕಪುಟ್ಟ ಹಣದ ಸಹಾಯ ಮಾಡುವ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ರಾಚಯ್ಯ.—ಈಗಾಗಲೇ ನಾವು ಆಜ್ಞೆಯನ್ನು ಕಳುಹಿಸಿದ್ದೇವೆ. ಎಲ್ಲೆಲ್ಲಿ ಇಂಥ ನಿರ್ಗತಿಕರಿದ್ದಾರೆ ಅಂಥವರಿಗೆ ಒಂದು ಸಾವಿರ ರೂಪಾಯಿಯವರೆಗೂ ಹೌಸಿಂಗ್ ಮೆಟೀರಿಯಲ್ಸ್

ಅಂದರೆ ಮನೆ ಕಟ್ಟುವುದಕ್ಕೆ ಸಾಮಾನುಗಳನ್ನು ಕೊಡಬೇಕೆಂದು ಮಾಡಿದ್ದೇವೆ. ಅರಣ್ಯ ಇಲಾಖೆಯವರು 2 ಕಿಟಿಕಿ, 2 ಬಾಗಿಲುಗಳನ್ನು ಇವರಿಗೆ ಕೊಡುವಂತೆ ವ್ಯವಸ್ಥೆ ಮಾಡಿದ್ದೇವೆ. ಇವುಗಳು ಪಂಚಾಯಿತ್ತಿಗಳು, ಗ್ರಾಮ ಪಂಚಾಯಿತ್ತಿಗಳು, ಮುನಿಸಿಪಾಲಟಿಗಳಿಗೆ ಅನ್ವಯಿಸುವ ರೀತಿಯಲ್ಲಿ ಮಾಡೋಣ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಅದನ್ನೇನೋ ಕಟ್ಟಿಸಿದ್ದೀರಿ, ಆದರೆ ಅದು ಶಿಥಿಲವಾಗುವ ರೀತಿಯಲ್ಲಿ ಇದೆ. ಮೈನ್‌ಟೆನೆನ್ಸ್ ಗ್ರಾಂಟ್ಸ್ ಕೊಟ್ಟಿದ್ದೀರಾ ? ಉದಾಹರಣೆಗೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ 3 ಲಕ್ಷ ರೂಪಾಯಿ ಖರ್ಚುಮಾಡಿ ಕಮ್ಯುನಿಟಿ ಸೆಂಟರ್ ಕಟ್ಟಿಸಿದ್ದೀರಿ. ಅದರಲ್ಲಿ ಅರ್ಧ ಭಾಗ ಉಪಯೋಗಿಸಿದ್ದಾರೆ, ಇನ್ನು ಉಳಿದ ಅರ್ಧಭಾಗ ಹಾಗೆಯೇ ಇದೆ. ಅದರಲ್ಲಿ ಕಿಟಿಕಿ ಬಾಗಿಲುಗಳನ್ನು ಯಾರೋ ಕಿತ್ತುಕೊಂಡು ಹೋಗಿದ್ದಾರೆ.ಈ ಬಗ್ಗೆ ಪೊಲೀಸ್‌ಗೂ ದೂರು ಕೊಟ್ಟಿದ್ದೇವೆ.

ಶ್ರೀ ಎನ್. ರಾಚಯ್ಯ.—ಸ್ಥಳೀಯ ಸಂಸ್ಥೆಗಳಲ್ಲಿರತಕ್ಕ ಹಣದಲ್ಲಿ ಹರಿಜನ ಗಿರಿಜನರಿಗೆ ಇರತಕ್ಕ ಸ್ಮಶಾನ ಮುಂತಾದುವನ್ನು ಮೈನ್‌ಟೇನ್ ಮಾಡುತ್ತಿದ್ದಾರೆ, ಅದರ ಜೊತೆಗೆ ಇದನ್ನು ಮಾಡೋಣ.

ಶ್ರೀ ಜಿ. ಕೆ. ಸುಬ್ಬಯ್ಯ.—ಸ್ವಾಮಿ, ಸರ್ಕಾರದವರು ಟಾಡಿ ಷಾಪ್‌ಗಳನ್ನು ಪಾಠಶಾಲೆಗಳು ಇರುವ ಕಡೆ, ದೇವಸ್ಥಾನಗಳು ಇರುವ ಕಡೆ, ಹರಿಜನರ ಕೇರಿ ಇರುವ ಕಡೆ ಇರುವುದಿಲ್ಲವೆಂದು ಗೆಜಿಟ್ ನೋಟಿಫಿಕೇಷನ್‌ನಲ್ಲಿ ಹೇಳಿದ್ದೀರಿ. ಆದರೆ ಹರಿಜನರ ಕೇರಿ ಇರುವಕಡೆಯೇ ಕೊಟ್ಟಿದ್ದಾರೆ. ಅನೇಕ ಕಡೆಗಳಲ್ಲಿ ನೂರಕ್ಕೆ ತೊಂಬತ್ತು ಭಾಗ ಹರಿಜನರು ಇರುವ ಕೇರಿಯಲ್ಲಿ ಹಾಕಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಡೆಪ್ಯುಟಿ ಕಮಿಷನರ್‌ರವರಿಗೆ ಬರೆದಿದ್ದೇವೆ. ಗೌರ್ನಮೆಂಟ್‌ಗೆ ಬರೆದಿದ್ದೇವೆ, ಎಷ್ಟೋ ಸಂದರ್ಭಗಳಲ್ಲಿ ಟಾಡಿ ಷಾಪ್ಸ್ ಬಳಿ ಗಲಾಟೆಗಳಾಗಿ ಕ್ರಿಮಿನಲ್ ಕೇಸ್ ಕೂಡ ಆಗಿವೆ. ಆದುದರಿಂದ ಕೂಡಲೇ ಈ ಟಾಡಿ ಷಾಪ್‌ಗಳನ್ನು ಅಲ್ಲಿಂದ ತೆಗೆಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಈ ವಿಚಾರದಲ್ಲಿ ಸಂಬಂಧಪಟ್ಟ ಅಬ್ಕಾರಿ ಇಲಾಖೆಯವರು ಪ್ರತಿ ವರ್ಷ ಆಕ್ಷನ್ ಮಾಡಿ ಎಕ್ಸೈಸ್ ಸೇಲ್ಸ್ ಮಾಡುತ್ತಾರೆ. ಹೀಗೆ ಎಕ್ಸೈಸ್ ಸೇಲ್ಸನ್ನು ಒಂದು ಸಾರಿ ಮಾಡಿದ ಮೇಲೆ ಮತ್ತೆ ಅವನ್ನು ಬದಲಾಯಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇನ್ನು ಮುಂದೆ ಎಕ್ಸೈಸ್ ಸೇಲ್ಸ್ ಆಕ್ಷನ್ ಮಾಡುವಾಗ ಹರಿಜನರ ಕೇರಿಗಳ ಹತ್ತಿರ ಇರತಕ್ಕ ಟಾಡಿ ಷಾಪ್‌ಗಳನ್ನು ಆದಷ್ಟು ದೂರ ಹಾಕಬೇಕೆಂದು ಅಜ್ಞೆ ಹೊರಡಿಸಿದ್ದೇವೆ. ಅದನ್ನು ಸಂಬಂಧಪಟ್ಟ ಇಲಾಖೆಯವರೂ ಒಪ್ಪಿಕೊಂಡಿದ್ದಾರೆ. ಇವನ್ನು ಕಾರ್ಯಗತ ಮಾಡುವ ವಿಚಾರದಲ್ಲಿ ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಮಾತನಾಡಿದ್ದೇವೆ.

ಶ್ರೀ ಕೆ. ಸಿದ್ದಯ್ಯ.—ನೋಟಿಫಿಕೇಷನ್ ಆಗಿರುವ ಕಡೆ ಹಾಕದೆ ಬೇರೆ ಕಡೆ ಹಾಕಿಕೊಂಡಿದ್ದಾರೆ, ಹರಿಜನರ ಕೇರಿಯೊಳಗೂ ಹಾಕಿಕೊಂಡಿದ್ದಾರೆ.

ಶ್ರೀ ಎನ್. ರಾಚಯ್ಯ.—ಇದು ಈಗಾಗಲೇ ಸೇಲ್ಸ್ ಆಗಿದೆ, ಆದರೂ ಕೂಡ ಇದು ನನ್ನ ಗಮನದಲ್ಲಿ ಇದೆ. ಮುಂದಿನ ಸೇಲ್ಸ್‌ನೊಳಗೆ ಪ್ರಯತ್ನ ಮಾಡೋಣ.

Sri H.M. CHANNABASAPPA· I may take sometime. But, it is not desirable that we should pass the Motion of Thanks to the Governor's address without the Opposition. They have made so many criticisms and suggestions. Naturally, courtesy requires that we should answer them also. So, I suggest that this could be taken up tomorrow.

Mr. DEPUTY SPEAKER.—So, the House will now stand adjourned and meet tomorrow at 1-00 P.M.

The House adjourned at Fifty Minutes past Five of the Clock to meet again at One of the Clock on Wednesday the 19th February 1975.